ಶಾಸನ ರಚನೆ

ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 1996
ಪರ್ಯಾಲೋಚನೆ ಪ್ರಸ್ತಾವ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಅಧ್ಯಕ್ಷರು : ವಿಧೇಯಕದ ಮೇಲೆ ನಡೆದ ಚರ್ಚೆಗೆ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಈಗ ತಾವೇ ಉತ್ತರ ಕೊಡುತ್ತೀರೋ ಅಥವಾ ಮುಖ್ಯ ಮಂತ್ರಿಗಳು ಕೊಡುತ್ತಾರೋ?

ಶ್ರೀ ಆರ್.ಎಲ್. ಜಾಲಪ್ಪ : ಮೊದಲು ನಾನೇ ಕೊಡುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಇರುವುದರಿಂದ ನಾನು ಒಂದು ವಿನಂತಿಯನ್ನು ಮಾಡುತ್ತೇನೆ. ನಾವು ತಮಗೆ ಈ ಸದನದಲ್ಲಿ ಎಲ್ಲಾ ರೀತಿಯ ಸಹಕಾರವನ್ನೂ ಕೊಡುತ್ತೇವೆ. ತಮಗೂ ಗೊತ್ತಿದೆ. ಹಿಂದೆ ಕಾವೇರಿಯ ಸಮಸ್ಯೆ ಬಂದಾಗ ನಾವೆಲ್ಲರೂ ಇಲ್ಲಿ ಅಣ್ಣತಮ್ಮಂದಿರಂತೆ ಒಟ್ಟಿಗೇ ಕುಳಿತು ರಾಜ್ಯದ ಜನರ ಹಿತದೃಷ್ಟಿಯಿಂದ ರಾಜಕಾರಣ ಮಾಡದೆ ಸಹಕಾರ ಕೊಟ್ಟಿದ್ದೇವೆ. ಬಹಳ ಕಷ್ಟಪಟ್ಟು ತಂದಿರತಕ್ಕ ಈ ಮಸೂದೆಯ ಬಗ್ಗೆ ಇಲ್ಲಿರುವಂಥ ಇಬ್ಬರು ಮಾಜಿ ಮುಖ್ಯ ಮಂತ್ರಿಗಳು, ಇಲ್ಲಿರತಕ್ಕ ಎಲ್ಲಾ ವಿರೋಧಪಕ್ಷದವರು, ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನ ಮಾಡಿದ್ದೇವೆ. ಈ ಬಿಲ್‌ನಿಂದ ಏನೇನು ನ್ಯೂನತೆಗಳಾಗಬಹುದು, ಮುಂದೆ ಈ ರಾರಜ್ಯದ ರೈತರಿಗೆ ಈ ಭೂಸುಧಾರಣಾ ತಿದ್ದುಪಡಿಯನ್ನು ತರುವುದರಿಂದ ಏನೇನು ಗಂಡಾಂತರ ಆಗಬಹುದೆಂಬುದನ್ನು ನಾವು ತಿಳಿಸುವ ಪ್ರಯತ್ನ ಮಾಡಿದ್ದೇವೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಾವು ತಿಳಿಸುವ ಪ್ರಯತ್ನ ಮಾಡಿದ್ದೇವೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಬಹಳ ಅನುಭವಿಗಳಿದ್ದೀರಿ, ಈ 120ನೇ ಸೆಕ್ಷನ್‌ಗೆ ತಿದ್ದುಪಡಿಯನ್ನು ತಂದು ರೈತರನ್ನು ಕಷ್ಟಗಳಿಗೆ ಸಿಕ್ಕಿಸುವಂಥ ಕೆಲಸವನ್ನು ಈ ದೇಶದಲ್ಲಿ ಯಾರೂ ಕೂಡ ಮಾಡಿಲ್ಲ. ಆದರೆ ಬಹುಶಃ ಆ ಕೆಲಸವನ್ನು ಈ ದೇಶದಲ್ಲಿ ಮೊದಲಬಾರಿಗೆ ನೀವು ಮಾಡುವುದಕ್ಕೆ ಹೊರಟಿದ್ದೀರಿ. ಇದನ್ನು ತಾವು ರೈತರ ಹಿತದೃಷ್ಟಿಯಿಂದಲೇ ಮಾಡಿದ್ದೀರೆಂದು ನಾವು ಭಾವಿಸುವುದಾದರೆ, ಅನೇಕ ಕೊರತೆಗಳು ನಮಗೆ ಇಲ್ಲಿ ಕಾಣುತ್ತಿರುವುದರಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಚರ್ಚೆಮಾಡಿ ಒಂದು ಒಮ್ಮತಕ್ಕೆ ಬಂದು ಅಲ್ಲಿ ಕೊರತೆಗಳನ್ನು, ನ್ಯೂನತೆಗಳನ್ನು ಪರಿಹಾರ ಮಾಡಿ ಇದಕ್ಕೆ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿಮಾಡಬೇಕೆಂಬ ಒಂದು ಅಪೇಕ್ಷೆ ನಮ್ಮದಿದೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರದಲ್ಲಿ

ಮತ್ತೊಮ್ಮೆ ವಿನಂತಿ ಮಾಡುವುದೇನೆಂದರೆ, ನಿನ್ನೆ ಕೂಡ ತಾವು ಹೇಳಿದ್ದೀರಿ, ಆದ್ದರಿಂದ ನಾವು ಮತ್ತೆ ಏನನ್ನೂ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಏಕೆಂದರೆ ಮಾನ್ಯ ಕಡಿದಾಳ್ ಮಂಜಪ್ಪನಂಥವರು, ಮಾನ್ಯ ಬಿ.ಡಿ. ಜತ್ತಿಯಂಥವರು, ದೇವರಾಜ ಅರಸರಂಥವರು ಬಹಳ ಶ್ರಮಿಸಿ 1965ರಲ್ಲಿ ಈ ಭೂಸುಧಾರಣಾ ಕಾಯಿದೆಯನ್ನು ಏನು ಜಾರಿಗೆ ತಂದರು. ನಾಡಿನ ರೈತರಿಗೆ ನ್ಯಾಯವನ್ನು ಒದಗಿಸಿಕೊಡುವಂಥ, ರಕ್ಷಣೆಯನ್ನು ಕೊಡುವಂಥ ಕೆಲಸವನ್ನು ಬಹಳ ಕಷ್ಟಪಟ್ಟು, ಶ್ರಮವಹಿಸಿ, ಬೆವರನ್ನು ಸುರಿಸಿ ಈ ದಿಸೆಯಲ್ಲಿ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಆಡಳಿತ ಪಕ್ಷದಲ್ಲಿ ಯಾರೇ ಕೂತಿರಲಿ ತಮ್ಮ ಆತ್ಮ ಸಾಕ್ಷಿಗೆ ಅನುಗುಣವಾಗಿ ಈ ಬಿಲ್ಲಿಗೆ ಮತ ನೀಡಿ ಎಂದು ಹೇಳುತ್ತಿದ್ದೇನೆ. ನಿಮ್ಮಲ್ಲಿರುವವರೂ ಕೂಡ ಈ ಬಿಲಗೆ ತಿದ್ದುಪಡಿಯನ್ನು ತರುವುದು ಬೇಡವೆಂದು ಬಹುತೇಕ ಸದಸ್ಯರು ನಮ್ಮ ಜೊತೆಯಲ್ಲಿ ಕೈ ಎತ್ತುವ ಸಂದರ್ಭವೂ ಇದೆ. ಇದು ಕಷ್ಟ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಆಗುವುದಿಲ್ಲ.

(ಗೊಂದಲ)

ಶ್ರೀ ಜಿ.ಬಿ. ಶಿವಕುಮಾರ್ : ಈ ರೀತಿ ಮಗುವನ್ನೂ ಚಿವುಟುವುದು, ತೊಟ್ಟಿಲನ್ನೂ ತೂಗುವುದು ಬೇಡ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಅಂದುಕೊಂಡೆ ಎಂದರೆ, ಬಹುಶಃ ನಾನು ಹೀಗೆ ಹೇಳಿದರೆ, ನೀವು ಹೌದು, ಹೌದು, ಎಂದು ಹೇಳಬಹುದೇನೋ, ಆಗ ಮಾನ್ಯ ಮುಖ್ಯ ಮಂತ್ರಿಯವರಿಗೆ ಮನಸ್ಸು ಕರಗಿ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬಹುದೇನೋ ಎಂದು ಅಂದುಕೊಂಡಿದ್ದೆ. ಇಲ್ಲ, ಇಲ್ಲ, ಎಂದು ಹೇಳುವುದಾದರೆ ಇದನ್ನು ನಾನು ವಿರೋಧಮಾಡುವುದಿಲ್ಲ. ಮಾನ್ಯ ಅಧ್ಯಕ್ಷರೆ ಹಿಂದೆ ಇದೇ ಸದನದಲ್ಲಿ ಒಂದು ಘಟನೆ ನಡೆಯಿತು. ಬಹುಶಃ 1984-85ರಲ್ಲಿ ಎಂದು ಕಾಣಿಸುತ್ತದೆ. ಆಗ ಮಾನ್ಯ ರಾಚಯ್ಯನವರು ಅರಣ್ಯಸಚಿವರಾಗಿದ್ದರು. ಅನ್ ಆಥರೈಸ್ಡ್ ಕಲ್ಟಿವೇಷನ್ ಮಾಡುತ್ತಿದ್ದಂಥ ಲಕ್ಷಾಂತರ ಜನ ಹರಿಜನ ಗಿರಿಜನ ಬಂಧುಗಳಿದ್ದರು ಅವರು ಮಾಡುತ್ತಿದ್ದ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವಂಥ ತಿದ್ದುಪಡಿ ಅದು. ಆ ಸಂದರ್ಭದಲ್ಲಿ ನಾನು ಒಬ್ಬನೇ ಇಲ್ಲಿದ್ದೆ. ಹಿರಿಯರಾದ ಮಾನ್ಯ ರಾಚಯ್ಯನವರ ಔದಾರ್ಯದ ಬಗ್ಗೆ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸ್ವಾಮಿ, ತಮ್ಮ ಕೈಯಿಂದಲೇ ಲಕ್ಷಾಂತರ ಜನ ರೈತರನ್ನು, ಹರಿಜನ ಗಿರಿಜನ ರೈತರನ್ನು ಬೀದಿಪಾಲು ಮಾಡುವಂಥಾದ್ದು ಈ ಶಾಸನ. ನನಗೆ ಇಲ್ಲಿ ಬೆಂಬಲ ಇಲ್ಲ. ನಾನೊಬ್ಬನೇ ಇದ್ದೇನೆ. ಆದರೆ ಇದು ಸರಿಯಾದುದಲ್ಲವೆಂದು ನಾನು ಅವರಿಗೆ ಮನದಟ್ಟು ಮಾಡಿದಾಗ ಬಹುಶಃ ಈ ರಾಜ್ಯದ ಇತಿಹಾಸದಲ್ಲೇ ಸರ್ಕಾರ ತಾನೇ ತಂದಂಥ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತಾ ಯಡಿಯೂರಪ್ಪನವರೇ ನೀವು ನನಗೆ ಜ್ಞಾನೋದಯಮಾಡಿದ್ದೀರಿ, ನಾನು ಅಧಿಕಾರಿಗಳ ಮಾತನ್ನು ಕೇಳಿ ತಪ್ಪು ಗ್ರಹಿಕೆ ಮಾಡಿದೆ ಇದನ್ನು ಇಲ್ಲಿ ತಂದಿದ್ದೆ. ಈಗ ಇದರ ಪರಿಣಾಮ ಏನಾಗುತ್ತದೆಂದು

ಗೊತ್ತಾಯಿತೆಂದು ಹೇಳಿ ಆ ತಿದ್ದುಪಡಿಯನ್ನು ಅವರು ವಾಪಸ್ಸು ತೆಗೆದುಕೊಂಡರು. ಅಂಥ ಒಂದು ಇತಿಹಾಸ ಇರತಕ್ಕದ್ದು ಈ ಸದನದಲ್ಲಿ ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಇದನ್ನು ತಾವು ಜಾಯಿಂಟ್ ಸಲೆಕ್ಟ ಕಮಿಟಿಗೆ ಕಳುಹಿಸಿಕೊಡಿ.

ಅಧ್ಯಕ್ಷರು : ನೀವು ಲಾ ಮಾಡಿಕೊಂಡಿಲ್ಲ, ನೀವು ಲಾ ಪಾಸ್ ಮಾಡಿಕೊಂಡಿದ್ದಿದ್ದರೆ ಬಹಳ ಒಳ್ಳೆಯ ಅಡ್ವೋಕೇಟ್ ಆಗುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆದ್ದರಿಂದಲೇ ಈ ಕಡೆಯ ಎಲ್ಲ ಮಾನ್ಯ ಸದಸ್ಯರೂ ಇದನ್ನು ಜಾಯಿಂಟ್ ಸೆಲೆಕ್ಟ ಕಮಿಟಿಗೆ ಕಳುಹಿಸಿಕೊಡಿ ಎಂದು ಕೇಳುತ್ತಿದ್ದೇವೆ. ಉತ್ತರ ಕೊಡುವುದಕ್ಕೆ ನೀವು ಹೀಗೆ ಎದ್ದು ನಿಂತರೆ, ನಿಮ್ಮ ಉತ್ತರವನ್ನು ಕೇಳುವಂಥ ಸ್ಥಿತಿಯಲ್ಲಿ ನಾವಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ತಾವೇನು ಈ ತಿದ್ದುಪಡಿಯಮೇಲೆ ಮಾತನಾಡಿದ್ದೀರಿ, ಆದರೆ ಇದು ಹಿಂದಿನ ವಿಧಾನಸಭಾ ಅಧಿವೇಶನದಲ್ಲಿ ತಾವು ವಾಕೌಟ್ ಮಾಡಿದಾಗ ಎರಡೂ ಸದನಗಳಲ್ಲಿ ಈ ಮಸೂದೆ ಪಾಸ್ ಆಗಿಹೋಗಿದೆ. ಅದನ್ನು ಪುನಃ ಜಾಯಿಂಟ್ ಸೆಲೆಕ್ಟ ಕಮಿಟಿಗೆ ಕಳುಹಿಸಿಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಈಗಿರತಕ್ಕದ್ದ ಕಂಟ್ರಿ ಪ್ಲಾನಿಂಗ್, ಟೌನ್ ಪ್ಲಾನಿಂಗಗೆ ಸೀಮಿತವಾದಂಥ ವಿಚಾರ ಎನಿದೆ ಅದಕ್ಕೆ ಮಾತ್ರ ಸೀಮಿತವಾಗಿ ಇಲ್ಲಿ ಚರ್ಚೆ ನಡೆಯುತ್ತಿದೆಯೇ ಹೊರತು ಬೇರೆ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ತಿದ್ದುಪಡಿಗೆ ಸೀಮಿತವಾಗಿ ಜಾಯಿಂಟ್ ಸೆಲೆಕ್ಟ ಕಮಿಟಿಯನ್ನು ಮಾಡಿ. ಇಲ್ಲದಿದ್ದರೆ ಸದನದ ಸಮಿತಿಯನ್ನು ಮಾಡಿ. ತಮಗೆ ಯಾವುದೇ ರೀತಿಯ ಸಹಕಾರವನ್ನು ಬೇಕಾದರೂ ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ತಮ್ಮ ರಿಪ್ಲೈ ಏನೆಂದು ನಾವು ನೋಡಿದ್ದೇವೆ. ನಿನ್ನೆಯ ದಿವಸ ಮುಂಬೈ ಕಂಪನಿಯವರಿಗೆ ತರಾತುರಿಯಲ್ಲಿ 300 ಎಕರೆಯನ್ನು...

ಶ್ರೀ ಹೆಚ್. ಡಿ. ದೇವೇಗೌಡ : ನಾನು ತಮಗೆ ಹೇಳುತ್ತೇನೆ ಕೇಳಿ. ನಾವು ಹೇಳುವುದನ್ನೆಲ್ಲಾ ತಾವು ಕುಳಿತು ನಿಧಾನವಾಗಿ ಕೇಳಿದರೆ ಅರ್ಥವಾಗುತ್ತದೆ. ಅನಂತರ ನೀವು ಹೇಳುವುದಾದರೆ ಹೇಳಿ. ನಮಗೆ ಇನ್ನೂ ಕನ್ವಿನ್ಸ ಆಗಿಲ್ಲ, ಆದ್ದರಿಂದ ಜಾಯಿಂಟ್ ಸೆಲೆಕ್ಟ ಕಮಿಟಿಗೆ ರೆಫರ್ ಮಾಡಿ, ಇದಕ್ಕೆ ಸದನದ ಸಮಿತಿಯನ್ನು ಮಾಡಿ, ಇತ್ಯಾದಿ ಏನು ಹೇಳುತ್ತೀರೋ ಹೇಳಿ. ಅದನ್ನು ಹೇಳುವ ಅಧಿಕಾರ ತಮಗೆ ಇದೆ. ಆದರೆ ನಾವು ಏನು ಉತ್ತರವನ್ನು ಹೇಳುತ್ತೇವೆಂಬುದೇ ತಮಗೆ ಗೊತ್ತಿಲ್ಲದೆ ಮಾತನಾಡುವುದು ಬೇಡ. ದಯವಿಟ್ಟು ನಾವು ಉತ್ತರ ಕೊಡುವುದಕ್ಕೆ ಸ್ವಲ್ಪ ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೋ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಯವರಿಗೆ, ಇಂಡಸ್ಟ್ರಿಯಲಿಸಟ್ಸಗೆ, ಅಥವಾ ಬೇರೆ ಯಾರಿಗೋ ಅನುಕೂಲ ಮಾಡಿಕೊಡುವುದಕ್ಕಾಗಿ ಸುತ್ತಿ, ಬಳಸಿ ಇದರಿಂದ ರೈತ ಹಿತಕ್ಕೆ ಬಹಳ ಅನುಕೂಲವಾಗುತ್ತದೆಂದು ಹೇಳಿಕೊಂಡು ನೀವು ಹೊರಟಿದ್ದೀರಿ ಇದು ಸರಿಯಲ್ಲ. ಈ ಉತ್ತರವನ್ನು ನಾವು ಏತಕ್ಕೆ ಕೇಳಬೇಕು. ತಾವು ಏನು ಉತ್ತರ ಕೊಡುತ್ತಿರೆಂಬುದು ನಮಗೆ ಗೊತ್ತಿದೆ. ಮಾನ್ಯ ಜಾಲಪ್ಪನವರು ನಿನ್ನೆ ನಾವು ಮಾತನಾಡಿದ 4-5 ಗಂಟೆ ಕಾಲದಲ್ಲಿ ಸುಮಾರು 3-4 ಗಂಟೆಕಾಲ ಅವರೇ ಮಾತನಾಡಿದ್ದಾರೆ. ಪ್ರತಿ ಕ್ಷಣದಲ್ಲೂ ಅವರು ಕ್ಲಾರಿಫೈ ಮಾಡಿದ್ದಾರೆ. ಆದರೂ

ನಮಗೆ ಮನದಟ್ಟಾಗಿಲ್ಲ. ತಮಗೇ ಬೆಂಬಲವನ್ನು ಕೊಡಬೇಕೆಂದಿರುವ ಮಾನ್ಯ ಬಂಗಾರಪ್ಪನವರೂ ಕೂಡ ಇದನ್ನು ವಿರೋಧ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯ್ಲಿಯವರೂ ಕೂಡ ವಿರೋಧ ಮಾಡಿದ್ದಾರೆ. ಮಾನ್ಯ ಖರ್ಗೆಯವರೂ ಕೂಡ ಇದೇ ಖಾತೆಯ ಸಚಿವರಾಗಿದ್ದವರು, ಅವರೂ ಕೂಡ ಹಲವಾರು ಸಂಗತಿಗಳನ್ನು ಇದರ ಬಗ್ಗೆ ಹೇಳಿದ್ದಾರೆ. ಈಗ ತಮ್ಮಲ್ಲಿ ನಮ್ಮ ವಿನಂತಿಯಾದರೂ ಇಷ್ಟೆ. ಈಗ ಈ ಸದನದಲ್ಲಿ ತಮ್ಮ ಉತ್ತರವನ್ನು ಕೇಳುವಂಥ ಸ್ಥಿತಿಯಲ್ಲಿ ನಾವಿಲ್ಲ. ಇದಕ್ಕೆ ಉತ್ತರ ಅಗತ್ಯವಿಲ್ಲ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ, ಇಲ್ಲದಿದ್ದರೆ ಸದನದ ಸಮಿತಿಯನ್ನು ಆದರೂ ಮಾಡಿ ಆಗ ನಾವು ನಮ್ಮ ಒಮ್ಮತದ ಅಭಿಪ್ರಾಯವನ್ನು ಕೊಡುತ್ತೇವೆ. ಅನಂತರ ನಾವೆಲ್ಲರೂ ಒಂದು ಒಮ್ಮತದ ತೀರ್ಮಾನಕ್ಕೆ ಬರೋಣ. ತಮ್ಮ ಉತ್ತರ ಏನೆಂದು ಗೊತ್ತಿದೆ. ಏಕೆಂದರೆ ಸುಮಾರು 6 ಗಂಟೆಗಳ ಹತ್ತಿರ ಹತ್ತಿರ ಬಂತು ಎಂದರೆ ಇದು ಪಾಸ್ ಆಗಿದೆ ಎಂದು ತಿಳಿದುಕೊಳ್ಳುವಂಥಾದ್ದು ಸಹಜವಾಗಿರತಕ್ಕದ್ದು. ಆದ್ದರಿಂದ ನಾವು ಮಾತ್ರ ಇದನ್ನು ಪ್ರತಿಭಟನೆ ಮಾಡುತ್ತೇವೆ. ಈ ಉತ್ತರವನ್ನು ಕೇಳುವಂಥ ಸ್ಥಿತಿಯಲ್ಲೂ ಕೂಡ ನಾವಿಲ್ಲ. ಅನಿವಾರ್ಯವಾಗಿ ನಾವು ಇವತ್ತು ಧರಣಿ ಕುಳಿತುಕೊಳ್ಳುತ್ತೇವೆಯೇ ಹೊರತು ವಾಕೌಟ್ ಮಾತ್ರ ಮಾಡುವುದೇ ಇಲ್ಲ. ಏಕೆಂದರೆ ಏನು ಯಡಿಯೂರಪ್ಪನವರೇ ತಾವು ವಿರೋಧಪಕ್ಷದ ನಾಯಕರಾಗಿದ್ದಾಗ ಇಂಥ ಮಸೂದೆಗೆ ಅನುಮತಿ ಕೊಟ್ಟಿದ್ದೀರಿ ಎಂದು ಜನರು ನಾಳೆ ನಮ್ಮನ್ನು ಕೇಳಬಹುದು. ಆ ಒಂದು ಜವಾಬ್ದಾರಿಯನ್ನು ನಾವು ನಿರ್ವಹಿಸುವುದಕ್ಕಾಗಿ ಇವತ್ತು ನಿಮ್ಮ ಉತ್ತರವನ್ನು ಕೇಳುವಂಥ ಸ್ಥಿತಿಯಲ್ಲಿ ನಾವಿಲ್ಲ. ಯಾವುದೇ ಕಾರಣಕ್ಕೂ ನಾವು ಇವತ್ತು ವಾಕೌಟ್ ಮಾಡುವುದಿಲ್ಲ. ಇದನ್ನು ಕೇಳುವುದೇ ಒಂದು ಪಾಪ. ಏಕೆಂದರೆ, ರೈತರಿಗೆ ಅನುಕೂಲ ಮಾಡಿಕೊಡುತ್ತೇವೆಂಬ ಒಂದು ನೆಪದಲ್ಲಿ ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿ ಈ ಕೆಲಸ ಮಾಡುವಂಥಾದ್ದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮ್ಮಲ್ಲಿ ನನ್ನ ಮನವಿ ಇಷ್ಟೆ. ಧರಣಿ ಮಾಡುವುದು, ವಾಕೌಟ್ ಮಾಡುವುದರಿಂದ ನಮ್ಮ ಈ ಸಮಸ್ಯೆ ಬಗೆಹರಿಯುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ನಾವು ಏನು ಮಾಡಬೇಕೋ ಮಾಡುತ್ತೇವೆ, ಅದು ಬೇರೆ. ಆದರೆ ನಾವು ಹಠ ಹಿಡಿಯಬೇಡಿ. ಒಂದು ಉದಾಹರಣೆಯನ್ನು ಕೊಡುವುದಾದರೆ, ಲ್ಯಾಂಡ್ ರೆವಿನ್ಯೂ ಆಕ್ಟ..

ಅಧ್ಯಕ್ಷರು : ಇದು ಬಹಳ ವಿಚಿತ್ರ. ನೀವು ಎಲ್ಲರೂ ಏನು ಹೇಳಬೇಕೋ ಅದನ್ನೆಲ್ಲಾ ಹೇಳಿದ್ದೀರಿ. ಆದರೆ ಇನ್ನೂ ಅವರು ತಮ್ಮ ಉತ್ತರವನ್ನೇ ಕೊಟ್ಟಿಲ್ಲ. ಅವರು ಉತ್ತರವನ್ನು ಕೊಟ್ಟಮೇಲೆ, ನೀವು ಮಾತನಾಡಿ. ತಮ್ಮ ಸಲಹೆಯನ್ನು ಅವರು ಒಪ್ಪಿಕೊಳ್ಳುತ್ತಾರೋ, ಇಲ್ಲವೋ ನೋಡಿ. ಅವರ ಉತ್ತರ ಏನೆಂದೇ ಗೊತ್ತಿಲ್ಲವಲ್ಲಾ!..

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದೇನೆಂದರೆ, ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅಥವಾ ಇದಕ್ಕೆ ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯತೆ ಇದೆ ಎಂದು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು 1981ರಲ್ಲಿ ರೆವಿನ್ಯೂ ಮಂತ್ರಿಯಾಗಿದ್ದಾಗ ಮಾನ್ಯ ದೇವರಾಜ ಅರಸರವರು ಇಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಆಗ ಲ್ಯಾಂಡ್ ರೆವಿನ್ಯೂ ಆಕ್ಟನ ಸೆಕ್ಷನ್ 95ಕ್ಕೆ ಒಂದು

ತಿದ್ದುಪಡಿಯನ್ನು ಮಾನ್ಯ ಬಸವಲಿಂಗಪ್ಪನವರ ಕಾಲದಲ್ಲಿ ತಂದಿತ್ತು. ಅಂದರೆ ಫ್ರ್ಯಾಗ್ಮೆಂಟೇಷನ್ ಅಂಡ್ ಕನಸಾಲಿಡೇಷನ್ ಆಕ್ಟ ಪ್ರಕಾರ ಅದು ಸರಬರದೇ ಇದ್ದಾಗ ರೆವಿನ್ಯೂ ಸೈಟುಗಳು ಎಂದು ಒಂದೊಂದು ಎಕರೆಯಲ್ಲೂ ಫ್ರ್ಯಾಗ್ಮೆಂಟ್ ಮಾಡಿ ಮಾರಾಟ ಮಾಡುತ್ತಿದ್ದರು. ಆಗ ಲಕ್ಷಾಂತರ ಸೈಟುಗಳು ಯದ್ವಾತದ್ವಾ ಬಂದು ಎಲ್ಲರೂ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಸಿ.ಎ. ಸೈಟುಗಳನ್ನು ಬಿಡಲಿಲ್ಲ, ರಸ್ತೆಗಳನ್ನೂ ಸರಿಯಾಗಿ ಬಿಡಲಿಲ್ಲ, ದೀಪ ಇಲ್ಲ, ನಲ್ಲಿ ಇಲ್ಲ, ಏನೂ ಇಲ್ಲ. ಆಗ ಮಾನ್ಯ ದೇವರಾಜ ಅರಸರವರು ವಿರೋಧ ಪಕ್ಷದ ನಾಯಕರಾಗಿ ಏನು ಹೇಳಿದರೆಂದರೆ, ಹಿಂದೆ ನಾವು ಈ ಲ್ಯಾಂಡ್ ರೆವಿನ್ಯೂ ಆಕ್ಟಗೆ ಈ ತಿದ್ದುಪಡಿಯನ್ನು ಮಾಡಬೇಕೆಂದು ಮಾಡಿದ್ದೆ ಆದರೆ ಮಾಡುವುದಕ್ಕಾಗಲಿಲ್ಲ. ಆದರೆ ಹಿಂದೆ ತಂದಿದ್ದಂಥ ತಿದ್ದುಪಡಿಯಿಂದ ಈಗ ತೊಂದರೆ ಆಗಿದೆ. ಬೆಂಗಳೂರು ನಗರ ಯದ್ವಾತದ್ವಾ ಬೆಳೆಯುತ್ತಿದೆ, ಆದ್ದರಿಂದ ಹೇಗಾದರೂ ಮಾಡಿ ಫ್ರ್ಯಾಗ್ಮೆಂಟೇಷನ್ ಅಂಡ್ ಕನಸಾಲಿಡೇಷನ್ ಆಕ್ಟನ 95ನೇ ಸೆಕ್ಷನಗೆ ಒಂದು ತಿದ್ದುಪಡಿಯನ್ನು ತನ್ನಿ ಎಂದು ಹೇಳಿದರು. ಆಗ ನಾನು ಹೇಳಿದೆ, ಸುಮಾರು 7-8 ತಿಂಗಳ ಹಿಂದೆ ನಿಮ್ಮ ಕಾಲದಲ್ಲೇ ಇದು ಆಗಿದೆ ಪುನಃ ಈಗ ನಾನು ತಿದ್ದುಪಡಿಯನ್ನು ತರುವುದು ಸರಿಯಾಗುವುದಿಲ್ಲ. ಅಲ್ಲದೆ ಉತ್ತರ ಕನ್ನಡ, ದಕ್ಷಿಣ ಕನ್ನಡ ಭಾಗದಲ್ಲಿ ಸಣ್ಣ ಹಿಡುವಳಿದಾರರು ಬಹಳವಾಗಿದ್ದಾರೆ, ಅವರ ಒತ್ತಡ ಏನೆಂದರೆ, ನಮ್ಮ ಕಡೆ ಸೈಟುಗಳು ಸಿಕ್ಕುವುದಿಲ್ಲ, ನಮ್ಮಲ್ಲಿ 5 ಸೆಂಟ್ಸ್, 10 ಸೆಂಟ್ಸ, 15 ಸೆಂಟ್ ಜಾಗಗಳಿರುತ್ತವೆ, ಆದ್ದರಿಂದ ಈ ಫ್ರ್ಯಾಗ್ಮೆಂಟೇಷನ್ ಇರಲಿ ಎಂಬುದು. ಇದನ್ನು ತಾವು ತಂದಿದ್ದೀರಿ. ಒಂದು ವೇಳೆ ಇದು ಸರಿಯಾಗಿಲ್ಲ ಎಂದು ತಾವು ಹೇಳುವುದಾದರೆ ಇದನ್ನು ಸರಿಪಡಿಸಿಕೊಳ್ಳಲು ನಾನು ಸಿದ್ಧವಾಗಿದ್ದೇನೆ. ಇವತ್ತು ಬೇಕಾದರೆ ತಮ್ಮ ಛೇಂಬರನಲ್ಲಿ ಎಲ್ಲಾ ಪಕ್ಷಗಳ ನಾಯಕರ ಒಂದು ಸಭೆಯನ್ನು ಕರೆಯಿರಿ. ನಾನೂ ಬರುತ್ತೇನೆ. ಅಲ್ಲೇ ಚರ್ಚೆಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳೋಣ ಎಂದು ನಾನು ಒಪ್ಪಿಕೊಂಡೆ. ಮತ್ತು ಈಗ ಮಾನ್ಯ ಜೆ.ಹೆಚ್. ಪಟೇಲರು ಇರುವ ಕೊಠಡಿಯಲ್ಲೇ ಒಂದು ಮೀಟಿಂಗ್ ಕರೆದು, ಕೇವಲ 4-5 ದಿನದೊಳಗೆ ಒಂದು ತಿದ್ದುಪಡಿಯನ್ನು ತಂದು ಪುನಃ ಹಿಂದೆ ಇದ್ದುದನ್ನು ರೆಸ್ಟೋರ್ ಮಾಡಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ದೊಡ್ಡ ದೊಡ್ಡ ವ್ಯಕ್ತಿಗಳೇ ಈ ಕಾನೂನು ಸರಿಯೇ ಎಂದು ಒಂದು ಅಭಿಪ್ರಾಯಕ್ಕೆ ಬಂದು ಇದನ್ನು ಬದಲಾವಣೆ ಮಾಡಬೇಕೆಂದು ಅಭಿಪ್ರಾಯವನ್ನು ಸೂಚಿಸಿದ ಮೇಲೆ ನಾವೂ ಬದಲಾವಣೆ ಮಾಡಿದ್ದೇವೆ, ಅವರೂ ಕೂಡ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ. ಅದೇರೀತಿ ಈಗ ಕಾನೂನು ಸರಿಯಾಗಿಲ್ಲ ಎಂದು ಅನಿಸಿದಮೇಲೆ ಇದಕ್ಕ ಪುನಃ ತಿದ್ದುಪಡಿ ತರುವುದಕ್ಕಾಗಲಿ, ಅಥವಾ ಇದನ್ನು ವಾಪಸ್ಸು ತೆಗೆದುಕೊಳ್ಳುವುದರಲ್ಲಾಗಲಿ ಯಾವುದೇ ಪ್ರತಿಷ್ಠೆಯನ್ನೂ ತೋರಿಸಬೇಡಿ. ಇದು ಕೇವಲ ರೈತರ ಹಿತದೃಷ್ಟಿಯಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಇರುವಂಥ ಕಾನೂನೇ ಹೊರತು ಯಾರೋ ಒಬ್ಬಬ್ಬರಿಗೋಸ್ಕರ ಅಲ್ಲ. ಎಲ್ಲೋ 2 ಪರ್ಸೆಂಟ್, 5 ಪರ್ಸೆಂಟ್, 10 ಪರ್ಸೆಂಟ್, ಜನರಿಗೆ ಅನುಕೂಲವಾಗುವುದರಿಂದ ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಳ್ಳಬೇಕೆಂಬುದು ಏನೂ ಇಲ್ಲ. ಇದರ ರಿಫರ್ಕೇಷನ್ ನಿಂದ ಒಂದೆರಡು ಪರ್ಸೆಂಟ್ ಜನರಿಗೆ ಅನುಕೂಲವಾದರೆ, ಸುಮಾರು 90 ಪರ್ಸೆಂಟ್ ಜನರಿಗೆ ಅನಾನುಕೂಲವಾಗುತ್ತದೆ. ಆ ದೃಷ್ಟಿಯಿಂದ ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ, ದಯವಿಟ್ಟು ಇದನ್ನು ಪುನರ್ ಪರಿಶೀಲನೆ

ಮಾಡಿ. ಈಗ ಪಾಸ್ ಮಾಡಿರತಕ್ಕ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ, ಇಲ್ಲದಿದ್ದರೆ ಸೆಕ್ಷನ್ 109ಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೀರಿ ಇದಕ್ಕಾಗಿಯೇ ಒಂದು ಸದನದ ಸಮಿತಿಯನ್ನು ಅಥವಾ ಜಾಯಿಂಟ್ ಸೆಲೆಕ್ಟ ಕಮಿಟಿಯನ್ನೋ ಮಾಡಿ, ಅಲ್ಲಿ ಸಮಗ್ರವಾಗಿ ಈ ಲ್ಯಾಂಡ್ ರೀಫಾರಂಸ್ ಆಕ್ಟನ್ನೇ ರಿವ್ಯೂ ಮಾಡೋಣ. ಅಥವಾ ಮಿಸ್ ಯೂಸ್ ಆಗದರೀತಿಯಲ್ಲಿ ನಿಮಗೆ ಅನುಕೂಲ ಆಗುವ ರೀತಿಯಲ್ಲಿ ಅಥವಾ ಕೈಗಾರಿಕಾಭಿವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ನಾವೂ, ನೀವೆಲ್ಲರೂ ಸೇರಿ ಮರುಚಿಂತನೆಯನ್ನು ಮಾಡೋಣ. ದಯವಿಟ್ಟು ಅದಕ್ಕಾದರೂ ಅವಕಾಶ ಮಾಡಿಕೊಡಿ. ಆದ್ದರಿಂದ ಇದರ ಬಗ್ಗೆ ಈ ಸದನದ ಸಮಿತಿಯನ್ನು ಮಾಡಿ, ಇಲ್ಲವೇ ಜಾಯಿಂಟ್ ಸೆಲೆಕ್ಟ ಕಮಿಟಿಯನ್ನು ಮಾಡಿ ಅದೂ ಬೇಡ ಏನ್ನುವುದಾದರೆ ಇದನ್ನು ವಾಪಸಾದರೂ ತೆಗೆದುಕೊಳ್ಳಿ ಇಷ್ಟಕ್ಕಾದರೂ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕೆಂದು ತಮ್ಮಮುಖಾಂತರ ಒತ್ತಾಯ ಮಾಡುತ್ತೇನೆ.

5.40 ಪಿ.ಎಂ.

+ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಬಹುಶಃ ಈ ಮನೆಯಲ್ಲಿ ದೀರ್ಘಕಾಲದಿಂದ ಸದಸ್ಯರಾಗಿರತಕ್ಕವರು ಪೈಕಿ ನಾನೂ ಒಬ್ಬ. 1957 ರಿಂದ ಇದ್ದೇನೆ. ಈ ಒಂದು ಚರಿತ್ರಾರ್ಹವಾದ ಕಾನೂನನ್ನು ಜಾರಿಗೆ ತರಬೇಕಾದರೆ ಪಟ್ಟಂಥ ಶ್ರಮ, ಆ ಮಹನೀಯರುಗಳನ್ನು ಇವತ್ತು ನಾವು ನೆನೆಸಿಕೊಳ್ಳುತ್ತಿದ್ದೇವೆ. ಸನ್ಮಾನ್ಯ ಶ್ರೀನಿಜಲಿಂಗಪ್ಪನವರ ಕಾಲದಲ್ಲಿ ಮಾನ್ಯ ಜತ್ತಿಯವರನ್ನು ಅಧ್ಯಕ್ಷತೆ ವಹಿಸುವುದಕ್ಕೆ ಹೇಳಿ, ಅವರೇ ಜಾಯಿಂಟ್ ಸೆಲೆಕ್ಟ ಕಮಿಟಿಯ ಅಧ್ಯಕ್ಷರಾಗಿದ್ದರು. ಬಹಳ ಮೇಧಾವಿಗಳನ್ನು ಇದರಲ್ಲಿ ಹಾಕಿದ್ದರು. ವಿರೋಧ ಮಾಡತಕ್ಕವರೂ ಅಷ್ಟೇ ಮೇಧಾವಿಗಳಾಗಿದ್ದರು. ಇದರಲ್ಲಿ ಹಾಕಿದ್ದರು. ವಿರೋಧ ಮಾಡತಕ್ಕವರೂ ಅಷ್ಟೇ ಮೇಧಾವಿಗಳಾಗಿದ್ದರು. ಐದು ದಿವಸ ಆರು ದಿವಸ ಭಾಷಣ ಮಾಡಿದ್ದಾರೆ. ಅಂಥ ವಿರೋಧ ಎಲ್ಲಾ ಎದುರಿಸಿ ಕಡೆಗೆ ಈ ಒಂದು ಆಕ್ಟ ಮಾಡಿದರು. ಇದನ್ನು ಜಾರಿಗೆ ತರುವುದರಲ್ಲಿ ಸನ್ಮಾನ್ಯ ಶ್ರೀ ಕಡಿದಾಳ್ ಮಂಜಪ್ಪನವರು ಮತ್ತು ಗೋಪಾಲಗೌಡರು, ಕಡೆಯಲ್ಲಿ ಸನ್ಮಾನ್ಯ ದೇವರಾಜ ಅರಸುರವರು ಪಟ್ಟಂಥ ಶ್ರಮ ಬಹಳ ನೆನೆಸಿಕೊಳ್ಳುತ್ತೇನೆ. ನಾನು ವೈಯಕ್ತಿಕವಾಗಿ ಇದನ್ನೂ ಹೇಳುತ್ತಿದ್ದೇನೆ. ನಿಜವಾಗಿಯೂ ಕೂಡ ಬಡವರಿಗೆ ದಾರಿದೀಪ ಇದು. ಲಕ್ಷಾಂತರ ಎಕರೆ ಜಮೀನು ಬಡವರಿಗೆ ಸಿಕ್ಕಿತು. ಹರಿಜನರಿರಬಹುದು, ಗಿರಿಜನರಿರಬಹುದು, ಹಿಂದುಳಿದವರಿರಬಹುದು ಯಾರು ಯಾರು ಶ್ರಮಜೀವಿಗಳಾಗಿ ತಮ್ಮ ಬೆವರನ್ನು ಭೂಮಿಯಲ್ಲಿ ಸುರಿಸುತ್ತಿದ್ದರೋ ಅವರಿಗೆ ದಕ್ಕಿಸಿಕೊಟ್ಟರು. ಇವತ್ತು ಅದನ್ನು ನೀವು ಕಿತ್ತುಕೊಳ್ಳುವುದಕ್ಕೆ ಏನೂ ಹೋಗುತ್ತಿಲ್ಲ. ನಾನು ಹೇಳುತ್ತಿದ್ದೇನೆ ನೀವು ಅದನ್ನು ಕಿತ್ತುಕೊಳ್ಳುವುದಕ್ಕೇನೂ ಹೋಗುತ್ತಿಲ್ಲ. ಕಿತ್ತುಕೊಂಡು ಹೋಗುವುದಕ್ಕೆ ದಾರಿ ತೋರಿಸಿಕೊಡುತ್ತಾ ಇದ್ದೀರಿ. ಇದೇ ನಿಜವಾದಂಥ ವೇದನೆ. ನೀವು ಕಿತ್ತುಕೊಳ್ಳುವುದಿಲ್ಲ. ಯಾರು ಕಿತ್ತುಕೊಂಡು ಹೋಗುವುದಕ್ಕೆ ತಯಾರಾಗಿದ್ದಾರೋ ಅವರಿಗೆ ನೀವು ದಾರಿ ತೋರಿಸಿಕೊಡುತ್ತಾ ಇದ್ದೀರಿ. ಇದು ಅತ್ಯಂತ ದುಃಖಕರವಾದ ದಿವಸ. ಅದಕ್ಕೆ ನಾನು ಮತ್ತೊಮ್ಮೆ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ ಸೆಕ್ಷನ್ 109 ಏನಿದೆ ಅದರ ಕಡೆ ತಾವು ಆಲೋಚನೆ ಮಾಡಿ. ಈಗ ಲಿಬರಲೈಸೇಷನ್ ಗ್ಲೋಬಲೈಸೇಷನ್ ಇದರ ಬಗ್ಗೆ ನಮಗೂ ಅಭಿಮಾನ ಇದೆ. ನಮ್ಮ ರಾಜ್ಯ

ಬೆಳೆಯಬೇಕು ಅಂತ ಆಸೆ ಇದೆ. ನಿಮಗೆ ಎಷ್ಟು ಆಸೆ ಇದೆಯೋ ಅಷ್ಟೇ ಆಸೆ ನನಗೂ ಇದೆ. ಆದರೆ ಎಷ್ಟರಮಟ್ಟಿಗೆ ಬೆಳೆಯಬಹುದೋ ಅಷ್ಟಕ್ಕೆ ಬಿಟ್ಟು ನೀವು ಎಲ್ಲೆ ಮೀರಿ ಹೋಗುತ್ತಾ ಇದ್ದೀರಿ. ಒಂದನ್ನು ನಿನ್ನೆ ದಿವಸ ಸನ್ಯಾಸ್ಯ ಖರ್ಗೆಯವರು ಹೇಳಿದರು. ನನಗೆ ಒಂದು ದೊಡ್ಡ ಕಾರ್ಖಾನೆ ಇಡಬೇಕು, ಕಬ್ಬಿಣ ಕಾರ್ಖಾನೆ ಇಡಬೇಕು, ನನಗೊಂದು ಸಾವಿರ ಎಕರೆ ಬೇಕು, ಬೇರೆಯವರ ಹೆಸರಿನಲ್ಲಿ ನಾನು 110 ಎಕರೆ 110 ಎಕರೆ ತೆಗೆದುಕೊಂಡರೆ ಅದನ್ನು ಅಡ್ಜಿ ಮಾಡುವುದಕ್ಕೆ ಏನೂ ಪ್ರಾವಿಷನ್ ಇಲ್ಲ. ಅದಕ್ಕೋಸ್ಕರ ನಾವು ಸಾಧನೆ ಮಾಡಿದವರ ಪುರೋಭಿವೃದ್ಧಿಗೆ ಅವಕಾಶ ಮಾಡದೆ ಅದು ಹಾಳಾಗಿಹೋಗುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಹಾಗಾಗುತ್ತದೆ. ನೇರವಾಗಿ ಅಲ್ಲದಿದ್ದರೂ ಕೂಡ ಬೇರೆಯವರು ಬಂದು ಇದನ್ನು ಕಸಿದುಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಹಾಗಾಗುತ್ತದೆ. ಅದಕ್ಕೋಸ್ಕರವಾಗಿ ಇದನ್ನು ಪರ್ಯಾಲೋಚನೆ ಮಾಡಿ. ರಾಜ್ಯದ ದೃಷ್ಟಿಯಿಂದ, ರೈತರ ದೃಷ್ಟಿಯಿಂದ, ಹಿಂದುಳಿದವರ ದೃಷ್ಟಿಯಿಂದ ಮಾಡಿ. ಇವತ್ತು ಬಿಲ್ ತಂದಿದ್ದೀರಿ. ಏನು? ಹರಿಜನರಿಗೆ ಜಮೀನು ತಂದುಕೊಡಬೇಕು ಎಂದು. ಹಣ ಇಲ್ಲದಿದ್ದರೆ ಹಣ ಕೊಟ್ಟು ಕೊಂಡುಕೊಡಬೇಕು ಎಂದು ಹೇಳಿದ್ದೀರಿ. ತುಂಬಾ ಸಂತೋಷ. ಕೊಂಡಂಥ ಜಮೀನಿಗೆ ನೀರು ಒದಗಿಸಬೇಕು ಗಂಗಾಕಲ್ಯಾಣ ಯೋಜನೆಯಲ್ಲಿ. ಇನ್ನೂ ಸಂತೋಷ. ಆದರೆ ಇದರ ಪರಿಣಾಮ ಏನಾಗುತ್ತದೆ ಎಂಬುದರ ಕಡೆಯೂ ತಾವು ಆಲೋಚನೆ ಮಾಡಿ. ನಿನ್ನೆ ಒಂದು ಉದಾಹರಣೆ ಕೊಟ್ಟೆ. ಅಂಥದ್ದು 20 ಉದಾಹರಣೆಗಳನ್ನು ಕೊಡುವುದಕ್ಕೆ ನಿಂತಿದ್ದೇನೆ ನಾನು. ನನ್ನ ಕ್ಷೇತ್ರದಲ್ಲಿ, ಏಕೆಂದರೆ ಇಂಡಸ್ಟ್ರಿಸ್ ಎಲ್ಲಾ ಇಲ್ಲೇ ಬರುತ್ತಿದೆ...

ಅಧ್ಯಕ್ಷರು : ನಿನ್ನೆ ಇದೆಲ್ಲಾ ಮಾತನಾಡಿದ್ದೀರಲ್ಲ.

ಶ್ರೀ ವೈ. ರಾಮಕೃಷ್ಣ : ಇದರಿಂದೇನಾಗುತ್ತದೆ? ಅರ್ಜಿ ಬರುತ್ತದೆ. ತಾವು ದಯವಿಟ್ಟು ಆಲೋಚನೆ ಮಾಡಿ. ಲಿಮಿಟೆಡ್ ಸ್ಕೋಪಗೆ ಲಿಮಿಟೆಡ್ ಪರ್ಸನ್ಸಗೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ಇವತ್ತು ಕಡಿದಾಳ್ ಮಂಜಪ್ಪನವರನ್ನು ಏತಕ್ಕೆ ನೆನೆಸಿಕೊಳ್ಳುತ್ತೇವೆ, ನಿಜಲಿಂಗಪ್ಪನವರನ್ನು ಏತಕ್ಕೆ ನೆನೆಸಿಕೊಳ್ಳುತ್ತೇವೆ? ಹಾಗೆ ಮಾಡಿದರೆ ದೇವೇಗೌಡರನ್ನು ಮತ್ತು ಜಾಲಪ್ಪನವರನ್ನು ನೆನೆಸಿಕೊಳ್ಳುತ್ತೇವೆ. ಇಲ್ಲದಿದ್ದರೆ ಚರಿತ್ರೆಯಲ್ಲಿ ನಿಮ್ಮ ಹೆಸರುಗಳು ಖಂಡಿತವಾಗಿಯೂ ಕೂಡ ಕೆಳಕ್ಕೆ ಹೋಗುತ್ತವೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರ ಆತ್ಮಸಾಕ್ಷಿ. ತಮ್ಮ ಆತ್ಮಸಾಕ್ಷಿಯ ಪ್ರಶ್ನೆಯಾಗುತ್ತದೆ ಈಗ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ ಸೆಕ್ಷನ್ 109.

(ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರು ಮತ್ತು ಮಾನ್ಯ ಸದಸ್ಯರಾದ ವಾಟಾಳ್ ಅವರು ಒಪ್ಪಿಗೆ ಮಾತನಾಡುತ್ತಿದ್ದರು. ಯಾವುದೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ).

ಶ್ರೀ ವಾಟಾಳ್ ನಾಗರಾಜ್ : ತಾವು ದೇವರಾಜ ಅರಸ್ ಜೊತೆ ಇದ್ದೀರಿ. ಇದೆಲ್ಲಾ ಓದಿದ್ದೀರಿ. ತಮಗೆ ಇತಿಹಾಸ ಗೊತ್ತಿದೆ. ಪ್ರಗತಿದಾಯಕವಾದ ಭಾಷಣಗಳನ್ನು ಅನೇಕ ಕಡೆ ಮಾಡಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಕರಾಳ ಶಾಸನವನ್ನು ಅನಿವಾರ್ಯವಾಗಿ ಹರಿದುಹಾಕುತ್ತೇನೆ.

ವಿರೋಧಪಕ್ಷದ ನಾಯಕನಾಗಿ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಇದಕ್ಕೆ ಸಾಕ್ಷೀಭೂತವಾಗಿ ಸುಮ್ಮನೆ ನಿಂತುಕೊಳ್ಳುವುದಕ್ಕೆ ಸಿದ್ಧನಿಲ್ಲ. ತಮ್ಮನ್ನು ಯಾರರೂ ಕ್ಷಮಿಸುವುದಿಲ್ಲ. ಈ ಪಾಪಕೃತ್ಯ ಮಾಡಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಮಿತಿ ಮಾಡಿ. ಸಮಿತಿ ರಚನೆಯಾಗಲಿ. ಸಮಿತಿ ಮುಂದೆ ವಿಚಾರಣೆ ಆಗಲಿ. ಸಮಗ್ರವಾಗಿ ಚರ್ಚೆಯಾಗಲಿ. ತರಾತುರಿ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗೋಪಾಲಗೌಡರ ಶಿಷ್ಯರು, ಅವರ ಗರಡಿಯಲ್ಲಿ ಬೆಳೆದಿರುವವರೂ ಆದ ಸನ್ಮಾನ್ಯ ಜೆ.ಹೆಚ್. ಪಟೇಲರು ಏನು ಹೇಳುತ್ತಾರೆ? ತಾವು ಏತಕ್ಕೆ ಅಲ್ಲಿ ಸುಮ್ಮನೆ ಕುಳಿತಿದ್ದೀರಿ? ಗೋಪಾಲಗೌಡರ ಸಿದ್ಧಾಂತಕ್ಕೆ ಹೋರಾಟ ಮಾಡುವುದಕ್ಕೆ ಒಳ್ಳೆ ಸಮಯ ಇದು. ಅದಕ್ಕಾಗಿ ರಾಜೀನಾಮೆ ಕೊಟ್ಟುಹೋಗುವ ಸಂದರ್ಭ ಇದು. ಒಂದು ಕ್ಷಣ ಉಪಮುಖ್ಯಮಂತ್ರಿಯಾಗಿ ಇರಕೂಡದು.

ಶ್ರೀ ವಾಟಾಳ್ ನಾಗರಾಜ್ : ಇಂಥ ಕರಾಳಶಾಸನ ತರಬೇಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಷ್ಟೆಲ್ಲಾ ಒತ್ತಾಯ ಬರುತ್ತಿದೆ. ತಾವಾದರೂ ಮಧ್ಯಪ್ರವೇಶ ಮಾಡಿ ಹೇಳಿ.

(ಶ್ರೀಮತಿ ಪ್ರಮೀಳಾ ನೇಸರ್ಗಿ ಅವರು ರೈತರಿಗೆ ಅನ್ಯಾಯವಾಗುವ ಕಾನೂನು ಇದು ಎಂದು ತಿದ್ದುಪಡಿ ಮಸೂದೆಯ ಪ್ರತಿಯನ್ನು ಹರಿದುಹಾಕಿದರು).

(ಗೊಂದಲ)

(ಭಾರತೀಯ ಜನತಾ ಪಕ್ಷದ ಸದಸ್ಯರು, ಕನ್ನಡ ಚಳುವಳಿ ಪಕ್ಷದ ಶ್ರೀ ವಾಟಾಳ್ ನಾಗರಾಜ್ ಅವರು ಹಾಗೂ ರೈತಸಂಘದ ಶ್ರೀ ಪುಟ್ಟಣ್ಣಯ್ಯ ಅವರು ಅಧ್ಯಕ್ಷ ಪೀಠದ ಮುಂಭಾಗದ ಭಾವಿಯಲ್ಲಿ ಬಂದು ನಿಂತರು).

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ನಾನು ಈಗ ಉತ್ತರ ಕೊಡಬಹುದು ಅಂತ ಕಾಣುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಸೆಕ್ಷನ್ 109 ಈ ರೀತಿ ಇತ್ತು.

(ಗೊಂದಲ)

ಅಧ್ಯಕ್ಷರು : ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಕಡಿದಾಳ್ ಮಂಜಪ್ಪನವರ ಹೆಸರು, ಗೋಪಾಲಗೌಡರ ಹೆಸರು, ದೇವರಾಜ ಅರಸರ ಹೆಸರುಗಳನ್ನು ಹೇಳಿದಿರಿ. ನಾನು ಮಂಜಪ್ಪನವರನ್ನು ಗೋಪಾಲಗೌಡರನ್ನು ಕೇಳಿದ್ದೇನೆಯೇ ಹೊರತು ಅವರ ಆಶ್ರಯದಲ್ಲಿದ್ದು

ಕೆಲಸ ಮಾಡುವಂಥ ಸುಯೋಗ ನನಗೆ ಇರಲಿಲ್ಲ. ದೇವರಾಜಅರಸ್ ಅವರಿಗೆ ಪ್ರಜಾಪ್ರಭುತ್ವದಲ್ಲಿ ಬಹಳ ನಂಬಿಕೆ ಇತ್ತು. 1980ನೇ ಇಸವಿಯಲ್ಲಿ ಪಾರ್ಲಿಮೆಂಟ್ ಚುನಾವಣೆ ನಡೆದಾಗ ಇನ್ನೂ 10-12 ಸ್ಥಾನಗಳದಷ್ಟೇ ಫಲಿತಾಂಶ ಬಂದಿತ್ತು. ಯಾರೂ ಈ ರಾಜ್ಯದಲ್ಲಿ ಅವರ ಹತ್ತಿರ ಹೋಗಿ ರಾಜೀನಾಮೆ ಕೊಡಬೇಕೆಂದು ಕೇಳಿರಲಿಲ್ಲ. ಅವರೇನೂ ಮೆಜಾರಿಟಿಯನ್ನು ಕಳೆದುಕೊಂಡಿರಲಿಲ್ಲ. ಎಲ್ಲಿಂದಲೋ ಬಂದವರು ಸೀದ ರಾಜಭವನಕ್ಕೆ ಹೋಗಿ ರಾಜೀನಾಮೆಯನ್ನು ಕೊಟ್ಟುಬಂದರು. ಏತಕ್ಕೆಂದರೆ ಜನಾಭಿಪ್ರಾಯ ನನ್ನ ವಿರುದ್ಧ ಇದ್ದಾಗ ನಾನು ಅಧಿಕಾರದಲ್ಲಿರುವುದಿಲ್ಲ ಎಂದು ಹೇಳಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾವು ಹೇಳಬೇಕಾದ್ದನ್ನೆಲ್ಲಾ ಸವಿಸ್ತಾರವಾಗಿ ಹೇಳಿದ್ದೀರಿ. ಅವರೂ ಕೇಳಿದ್ದಾರೆ. ಅವರು ಏನು ಹೇಳುತ್ತಾರೆ ಅಂತ ಕೇಳುವುದಕ್ಕೆ ನೆಮ್ಮದಿ ಇಲ್ಲದೇ ತಾವು ಬಂದು ಇಲ್ಲಿ ನಿಂತುಬಿಟ್ಟರೆ ದೇವರಾಜ ಅರಸರ ಹೆಸರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿಮಗೆ ಯಾವ ರೀತಿಯ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿದಮೇಲೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ನಾವು ನಿಂತಿದ್ದೇವೆ. ಹೇಳಲಿ ನೋಡೋಣ. ಏನು ಹೇಳುತ್ತಾರೋ. ಹೌಸ್ ಕಮಿಟಿ ಕಾನಸ್ಟಿಟ್ಯೂಟ್ ಮಾಡುತ್ತಾರೋ ಹೇಗೆ? ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುತ್ತಾರೋ ಹೇಗೆ? ಇಲ್ಲ ಅಂದರೆ ವಿತಡ್ರಾ ಮಾಡುತ್ತಾರೋ ಹೇಗೆ? ಈ ಮೂರರಲ್ಲಿ ಯಾವುದು ಮಾಡುತ್ತಾರೆ ಎಂಬುದನ್ನು ಹೇಳಿಬಿಡಲಿ; ಉತ್ತರವೇ ಬೇಕಾಗಿಲ್ಲ ಈ ಮೂರರಲ್ಲಿ ಯಾವುದಾದರೂ ಒಂದನ್ನು ಮಾಡುವುದಕ್ಕೆ ರೆಡಿ ಇದ್ದರೆ ನಾವು ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಅವರು ಹೇಳಲಿ. ನಾವೂ ಹೇಳುತ್ತೇವೆ ಯಾವ ವಿಷಯ ಅಂತ. ಅದನ್ನು ಒಪ್ಪಿಕೊಳ್ಳಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಈಗ ನೀವು ಹೇಳುವುದನ್ನೆಲ್ಲಾ ನಾವು ಕೇಳಿದ್ದೇವೆ. ನಾನು ಹೇಳುವುದನ್ನು ತಾವು ಕೇಳಿ.

(ಬಾವಿಯಿಂದ ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರು ಮಾತನಾಡುತ್ತಿದ್ದರು. ನಿಯಮದಂತೆ ದಾಖಲಿಸಲಿಲ್ಲ).

ಶ್ರೀ ಆರ್.ಎಲ್. ಜಾಲಪ್ಪ : ನೀವು ಮಾಡಿದ್ದು ಪರಭೆಕ್ಕಾಗಿದೆ ಎಂದು ನನಗೆ ಸಾವಿರ ಜನ ಹೇಳಿದ್ದಾರೆ. ಹೋದಕಡೆಯೆಲ್ಲಾ ಸಭೆಯಲ್ಲೆಲ್ಲಾ ಹೇಳಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಕಾಂಗ್ರೆಸಪಕ್ಷದ ಉಪನಾಯಕರು ಮೂರು ವಿಚಾರಗಳನ್ನು ಎತ್ತಿದ್ದಾರೆ. ಅವರು ಎತ್ತಿರತಕ್ಕ ವಿಚಾರ ತಾವು ಇದನ್ನು ಸದನದ ಸಮಿತಿಗಾದರೂ ವಹಿಸಿ. ಜಂಟಿ ಸದನ ಸಮಿತಿಗೆ ವಹಿಸಿ. ಇಲ್ಲದೇ ಹೋದರೆ ತಾವು ಇದನ್ನು ಹಿಂದಕ್ಕೆ ತೆಗೆದುಕೊಳ್ಳಿ. ತಾವು ಈ ಒಂದು ಮಸೂದೆ ಬಗ್ಗೆ ಚರ್ಚೆ ಮಾಡಿದ್ದೀರಿ. ವ್ಯಾಪಕವಾಗಿರತಕ್ಕ ವಿಚಾರವನ್ನು ಹೇಳಿದ್ದೀರಿ. ಆ ವಿಚಾರವನ್ನೆಲ್ಲಾ ಮಾನ್ಯ ಕಂದಾಯಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಕೇಳಿ ನೀವು ಹೇಳಿದ್ದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಉತ್ತರವನ್ನು ಕೇಳಿ ಆದಮೇಲೆ ಬಹುಶಃ ನನ್ನ ಮನಸ್ಸಿಗೆ ಸಮಾಧಾನ ಇದೆ. ಅವರ

ಉತ್ತರ ಮತ್ತು ಮುಖ್ಯ ಮಂತ್ರಿಗಳ ಉತ್ತರವನ್ನು ಕೇಳಿಯಾದಮೇಲೆ ಯಾವ ಮೂರು ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದೀರಿ ಅದು ಬೇಡ ಎಂದು ಇದಕ್ಕೆ ಮಂಜೂರಾತಿ ಕೊಡಬೇಕು ಎನ್ನುವ ಪರಿಸ್ಥಿತಿಗೆ ಬರಲಿಕ್ಕೂ ಸಾಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದರ ಅರ್ಥ ಮೂರರಲ್ಲಿ ಒಂದಕ್ಕೂ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ ಅಂತ ಆಯಿತು. ಆದರಿಂದ ನಾವು ಅನಿವಾರ್ಯವಾಗಿ ಧರಣಿ ಮಾಡಬೇಕಾಗುತ್ತದೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರೂ ಧರಣಿಯಲ್ಲಿ ಪಾಲ್ಗೊಂಡರು)

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ತಾವು ಈ ಮಸೂದೆಯ ಮೇಲೆ ಮಾತನಾಡಿ ಆದಮೇಲೆ ಸರ್ಕಾರದ ವತಿಯಿಂದ ಎನು ಉತ್ತರ ಕೊಡುತ್ತಾರೆನ್ನುವುದನ್ನು ಕೇಳಬೇಕಾಗಿರತಕ್ಕದ್ದು ಪ್ರಜಾತಂತ್ರ ವ್ಯವಸ್ಥೆಯ ಧರ್ಮ. ತಾವು ಅದನ್ನು ಪರಿಪಾಲನೆ ಮಾಡಿ. ಪರಿಪಾಲನೆ ಮಾಡಿ ಆದಮೇಲೆ ತಾವು ಸರ್ಕಾರದ ವತಿಯಿಂದ ಕೊಡತಕ್ಕ ಉತ್ತರವನ್ನು ಕೇಳಬೇಕು. ನೀವು ನಿಮ್ಮ ವಿಚಾರವನ್ನು ಹೇಳಿ ಆದಮೇಲೆ ಅದಕ್ಕೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕೋ ಅಥವಾ ಬೇಡವೊ? ಅದು ಪ್ರಜಾತಂತ್ರದ ವ್ಯವಸ್ಥೆಯ ಪದ್ಧತಿಯಲ್ಲವೇನು? ವಿರೋಧಪಕ್ಷದವರು ಹೇಳಿ ಆದಮೇಲೆ ಸರ್ಕಾರದವರು ಉತ್ತರ ಕೊಡಲಿಕ್ಕೆ ಆಸ್ಪದ ಮಾಡದೇ ಹೋದರೆ....

MR. SPEAKER : Mr. Nanaiah, Are the coming events casting their shodows in advance?

SRI M.C. NANAIAH : It appears to be so. I think very significantly they are coming together. What a point being that. Very significantly they are coming together. It apperars to be so now. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದನ್ನು ಕೇಳುತ್ತೇನೆ, ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮಾನ್ಯ ಖರ್ಗೆಯವರಲ್ಲಿ ಮತ್ತು ವಾಟಾಳನಾಗರಾಜರವರಲ್ಲಿ ಒಂದನ್ನು ಕೇಳುತ್ತೇನೆ ಬಹುಶಃ ಅವರು ಸರ್ಕಾರದ ಉತ್ತರವನ್ನು ಕೇಳುವುದಕ್ಕೆ ಮೊದಲೇ ತಾವು ಒಂದು ತೀರ್ಮಾನಕ್ಕೆ ಬಂದು ಧರಣಿಯಲ್ಲಿ ಕುಳಿತಿದ್ದು ಈ ಸದನದ ಇತಿಹಾಸದಲ್ಲಿ ಈ ತರಹ ಮಾಡಿರತಕ್ಕದ್ದು ಇಲ್ಲ. ಸರ್ಕಾರದ ಉತ್ತರವನ್ನು ಕೇಳಿ. ಕೇಳಿ ಆದಮೇಲೆ ನೀವು ಏನು ಬೇಕಾದರೂ ಮಾಡಿ.

(ಮಾನ್ಯ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿದ್ದು ನಿಮ್ಮ ಉತ್ತರ ಏನು ಎಂದು ಗೊತ್ತಾಗಿದೆಯಲ್ಲವೆಂದು ಮಾತನಾಡುತ್ತಿದ್ದರು)

ಶ್ರೀ ಎಂ. ಸಿ. ನಾಣಯ್ಯ : ನಾವು ನಿಮ್ಮನ್ನು ಕನ್ವೀನ್ಸ್ ಮಾಡಬೇಕಲ್ಲ!

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಅಲ್ಲಿ ಧರಣಿ ಮಾಡುವವರು ಮಾತ್ರ ಮಾತನಾಡುತ್ತಿದ್ದಾರೆ. ಇಲ್ಲಿ ನಾವು ನಮ್ಮ ಸ್ಥಾನದಲ್ಲಿ ಕುಳಿತಿರುವವರಿಗೆ ಮಾತನಾಡಲಿಕ್ಕೆ ಅವಕಾಶ

ಕೊಡಿ. ದಯವಿಟ್ಟು ಧರಣಿ ಮಾಡುವವರು ಅಲ್ಲಿಂದ ಹೊರಗೆ ಬಂದು ಮಾತನಾಡಲಿಕ್ಕೆ ಹೇಳಿ ನಾವು ಮಾತನಾಡಬೇಕಾಗಿದೆ. ಸರ್ಕಾರ ಕರ್ನಾಟಕ ಭೂಸುಧಾರಣೆ ತಿದ್ದುಪಡಿ ವಿಧೇಯಕವನ್ನು ತಂದು ಇಡೀ ರಾಜ್ಯದಲ್ಲಿ ನಾವು ಯಾವ ಉದ್ದೇಶಕ್ಕೋಸ್ಕರ ಈ ಕಾಯಿದೆಯನ್ನು ತಂದಿದ್ದೇವೆಯೋ ಆ ಉದ್ದೇಶದ ಸರ್ವನಾಶ ಮಾಡುವಂತಹ ಈ ತಿದ್ದುಪಡಿ ಮಾಡುವುದು ಸರಿಯಲ್ಲವೆನ್ನುವುದನ್ನು ನಮ್ಮ ನಾಯಕರು ನಿನ್ನೆ ಹೇಳಿದ್ದಾರೆ. ನಾವು ಇಷ್ಟೊಂದು ಸಂಖ್ಯೆಯಲ್ಲಿ ಎಲ್ಲರೂ ಒಟ್ಟಿಗೆ ಸೇರಿಕೊಂಡು ಒತ್ತಾಯ ಪೂರ್ವಕವಾಗಿ ಜಾಯಿಂಟ್ ಸೆಲೆಕ್ಟ ಕಮಿಟಿಗೆ ಕೊಡಬೇಕೆನ್ನುವಂತಹ ನಮ್ಮದು ಎನು ಮಾತಿದೆ ಅದಕ್ಕೆ ಅವರು ಬೆಂಬಲ ಕೊಡದೇಬೇಕೆನ್ನುವಂತಹ ನನ್ನ ಮಾತು. ಏಕೆಂದರೆ ನಾವು ಕಳೆದ ಒಂದು ವರ್ಷದಿಂದ ಆಡಳಿತ ಪಕ್ಷಕ್ಕೆ ಬೆಂಬಲ ಕೊಟ್ಟುಕೊಂಡೇ ಬಂದಿದ್ದೇವೆ. ಇದೊಂದು ಕ್ರಾಂತಿಕಾರಕವಾದಂತಹ ಮಸೂದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ರೈತರು ಪಂಚೆ ಉಡುವವರೆಲ್ಲ ಪ್ಯಾಂಟು ಹಾಕಿ ಬೆಂಗಳೂರಿಗೆ ಬಂದು ಕೆಂಟುಕಿ ಚಿಕನ್ ತಿನ್ನುವಂತಹ ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡುತ್ತೀರಿ. ಅವನು ಕೆಂಟುಕಿ ಚಿಕನ್ ತಿಂದಮೇಲೆ ಅವನ ಹತ್ತಿರ ಹಣ ಖಾಲಿಯಾದ ಮೇಲೆ ಅವನು ಭಿಕ್ಷುಕನಾಗಿ ಅಲೆಯ ಬೇಕಾದ ಪರಿಸ್ಥಿತಿ ಉಂಟಾಗಿದೆ. ಈ ತಿದ್ದುಪಡಿಯನ್ನು ದಯವಿಟ್ಟು ಆಡಳಿತ ಪಕ್ಷದವರು ತರಬಾರದು. ಇದನ್ನು ದಯವಿಟ್ಟು ಜಾಯಿಂಟ್ ಸೆಲೆಕ್ಟ ಸಮಿತಿಗೆ ಕೊಡಬೇಕು. ನೀವು. ಇದರಲ್ಲಿ ಹಠ ಮಾಡಬೇಡಿ. ನಾಳೆ ಪಾರ್ಲಿಮೆಂಟ್ ಚುನಾವಣೆ ಬರುತ್ತದೆ ನಾವು ಕೂಡ ನಮ್ಮ ಜಿಲ್ಲೆಯಲ್ಲಿ ಮತ ಕೇಳಲಿಕ್ಕೆ ಹೋಗಬೇಕು. ಈ ಕ್ರಾಂತಿಕಾರಕ ಮಸೂದೆಯಿಂದಾಗಿ ನಮ್ಮರಾಜ್ಯದ ರೈತರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ನಾಶ ಮಾಡಿದ್ದೇವೆ ಅನ್ನುವುದನ್ನು ನಾನು ಪ್ರತಿಪಾದನೆ ಮಾಡುತ್ತಿದ್ದೇನೆ. ಉತ್ತರ ಕೊಡುವುದಿದ್ದರೆ ಕೊಡಲಿ ನಮ್ಮಿಂದ ಅದಕ್ಕೆ ಆಕ್ಷೇಪವಿಲ್ಲ. ಆದರೆ ದಯವಿಟ್ಟು ಇದನ್ನು ಜಾಯಿಂಟ್ ಸೆಲೆಕ್ಟ ಕಮಿಟಿಗೆ ಪುನರ್ ವಿಮರ್ಶೆ ಮಾಡಲಿಕ್ಕೆ ಕಳುಹಿಸಬೇಕೆಂದು ಹೇಳಿ ನಮ್ಮವಾದ. ಆದ್ದರಿಂದ ನಾವು ಕೂಡ ಧರಣಿ ಹೂಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಧರಣಿ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಸಭಾಪತಿಯಿದ ನೇತೃತ್ವದಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿಯಲ್ಲಿ ಪಾಲ್ಗೊಂಡರು)

SRI QUMARUL ISLAM : Mr. Speaker Sir,...

ಅಧ್ಯಕ್ಷರು : ಮಾನ್ಯ ಕಮರುಲ್ಲ ಇಸ್ಲಾಂರವರೇ ನೀವು ಕನ್ನಡದಲ್ಲಿ ಹೇಳಿರಿ, ನೀವು ಯಾವಾಗಲೂ ವಾಟಾಳನಾಗರಾಜರವರ ಪಕ್ಕದಲ್ಲಿಯೇ ಇರುತ್ತೀರಿ.

ಶ್ರೀ ಕಮರುಲ್ ಇಸ್ಲಾಂ : ನಾನು ಇಂಗ್ಲೀಷಿನಲ್ಲಿ ಮಾತನಾಡುತ್ತೇನೆ. ಏಕೆಂದರೆ ಕನ್ನಡ, ಇಂಗ್ಲೀಷ್ ಹಿಂದಿ ಅಲ್ಲ In the interest of economic reforms to the farmers, I request the Opposition Members they should see that it should be put to vote and passed. I fully support the Bill

(INTERRUPTION)

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದವರು ನನ್ನ ಉತ್ತರವನ್ನು ಕೇಳುವಂತಹ ಸೌಜನ್ಯವಾದರೂ ತೋರಿಸಬೇಕೆಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ. ಕಳೆದ ಅಧಿವೇಶನದಲ್ಲಿ ಕೆಲವು ಬದಲಾವಣೆಗಳನ್ನು ತಂದಿದ್ದೇವೆ ಈ ಆಕ್ಟಗೆ. ಅದರಲ್ಲಿ ಒಂದು 109 ಸೆಕ್ಷನ್ (1)ಎ ಮೊದಲು ಅದು ಇದ್ದದ್ದು ಹೇಗೆಂದರೆ Certain lands to be exempt from certain provisions subject to the provisions of Karnataka Town and Country Planning Act 1961, the State Government may by notification exempt from the provisions of Section 80, any land in any area to be used for urban non-agricultural activities.

(INTERRUPTION)

ಇದರಲ್ಲಿ ಅಮೆಂಡಮೆಂಟ್ ಮಾಡಿದಾಗ.....

(ಬಾವಿಯಲ್ಲಿ ಧರಣಿ ಮಾಡುತ್ತಿದ್ದ ವಿರೋಧಪಕ್ಷಗಳ ಸದಸ್ಯರು ರೈತ ವಿರೋಧಿ ಕಾಯಿದೆ ನಮಗೆ ಬೇಡವೆಂದು ಘೋಷಣೆ ಕೂಗುತ್ತಿದ್ದರು)

ಶ್ರೀ ಜೆ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ದಯಮಾಡಿ ಸಚಿವರು ಉತ್ತರ ಕೊಡುವಾಗ ಅವರು ಏನು ಹೇಳುತ್ತಾರೆಂದು ವಿರೋಧಪಕ್ಷದ ಸದಸ್ಯರಗಳು ಕೇಳಬೇಕು. ದಯವಿಟ್ಟು ಸಹನೆಯಿಂದ ಕೇಳಿ. ನಿಮಗೊಬ್ಬರಿಗೇನಾ ಅವಕಾಶ? ನಮ್ಮ ಸರ್ಕಾರದಿಂದ ಬರುವ ಉತ್ತರ ಕೇಳಿ.

ಅಧ್ಯಕ್ಷರು : ನಾನು ತಮಗೆ ಇಷ್ಟೇ ಹೇಳಲಿಕ್ಕೆ ಇಷ್ಟಪಡುತ್ತೇನೆ, ಒಂದು ಮಸೂದೆ ತಿದ್ದುಪಡಿಗೆ ಬಂದಾಗ ಅದನ್ನು ಒಪ್ಪಿಕೊಳ್ಳುವುದು ಒಪ್ಪಿಕೊಳ್ಳದಿರುವುದು ನಿಮ್ಮ ಸರ್ವ ಸ್ವಾತಂತ್ರ್ಯ. ಅವರಿಗೆ ಮೆಜಾರಿಟಿ ಇದ್ದರೆ ಪಾಸಾಗುತ್ತದೆ ಇಲ್ಲದಿದ್ದರೆ ಬಿದ್ದುಹೋಗುತ್ತದೆ. ತಿದ್ದುಪಡಿ ಮಸೂದೆ ಮಂಡನೆಯಾದ ಮೇಲೆ ಸಾಕಷ್ಟು ಜನ ಚರ್ಚೆಯಲ್ಲಿ ಪಾಲ್ಗೊಂಡಿದ್ದೀರಿ. ಉತ್ತರ ಕೊಡತಕ್ಕ ಹಕ್ಕು, ನಾನು ಅವರಿಗೆ ರಕ್ಷಣೆ ಕೊಡಬೇಕಾದ ಆದ್ಯಕರ್ತವ್ಯ ನನ್ನ ಮೇಲಿದೆ. ನಾನು ತಮಗೆ ಏನು ಹೇಳುತ್ತೇನೆ, ಸಮಾಧಾನಪಡುವುದಾದರೆ, ತಮ್ಮ ಸ್ಥಾನಗಳಿಗೆ ಹಿಂದಿರುಗಿ ಅಲ್ಲಿಂದಲಾದರೂ ಉತ್ತರ ಕೇಳಬಹುದು. ಅಥವಾ ನಾವು ಇಲ್ಲೇ ನಿಂತಿರುತ್ತೇವೆ, ಇಲ್ಲೇ ನಿಂತು ಉತ್ತರ ಕೇಳುತ್ತೇವೆಂದರೆ ನನ್ನದೇನು ಆಕ್ಷೇಪಣೆ ಇಲ್ಲ. ದಯಮಾಡಿ ನನ್ನ ಮಾತು ಕೇಳಿ, ಅವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ....

(ಬಾವಿಯಲ್ಲಿದ್ದ ವಿರೋಧಪಕ್ಷದ ನಾಯಕರು, ಮಂತ್ರಿಗಳು ಉತ್ತರ ಕೊಡಲಿಕ್ಕೆ ಬಿಡಲಿಲ್ಲವೆಂದು ಜನಗಳಿಗೆ ಗೊತ್ತಾಗಬೇಕೆಂದರು ನಾವು ಇಲ್ಲಿಂದ ಹೇಳುತ್ತಿದ್ದೇವೆ.)

ಅಧ್ಯಕ್ಷರು : ಇಲ್ಲಾ, ಆ ಹಕ್ಕು ನಿಮಗಿಲ್ಲ.

SRI K.N. NAGE GOWDA : Sir, you have to protect now. Allow the Government to reply. The cannot do this junder the rule.

(INTERRUPTION)

ಅಧ್ಯಕ್ಷರು : ನಾನು ತಮಗೆ ಇಷ್ಟೆ ಹೇಳುತ್ತೇನೆ. ಅದು ಡಿಸ್ಪರ್ಬೆನ್ಸ ಆಗುವುದಿಲ್ಲ? Abstructing anotherr Member of this August House in discharging his duties. ಮತ್ತೊಬ್ಬ ಗೌರವಾನ್ವಿತ ಸದಸ್ಯರು ತಮ್ಮ ಹಕ್ಕನ್ನು ಚಲಾಯಿಸುವುದಕ್ಕೆ ತಾವು ಅಡ್ಡಿ ಬಂದಂತಾಗುತ್ತದೆ. ಅದಕ್ಕೆ ತಮಗೆ ಹಕ್ಕಿಲ್ಲ. ನಿಮ್ಮ ಹಕ್ಕನ್ನು ನೀವು ಚಲಾಯಿಸಬಹುದೇ ಹೊರತು, ಇನ್ನೊಬ್ಬರ ಹಕ್ಕನ್ನು ಚಲಾವಣೆ ಮಾಡಲಿಕ್ಕೆ ನಿಂತಾಗ ಅದನ್ನು ನಿರ್ಬಂಧ ಮಾಡಲಿಕ್ಕೆ ನಿಮಗೆ ಅಧಿಕಾರವಿಲ್ಲ.

SRI H. SHIVAPPA : Ask the Opposition to behave.

(ಬಾವಿಯಲ್ಲಿ ಧರಣಿ ಮಾಡುತ್ತಿದ್ದ ಸದಸ್ಯರು ಘೋಷಣೆ ಕೂಗುತ್ತಿದ್ದರು)

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಿನ್ನೆ ನಮ್ಮ ಮೇಲೆ ಆಪಾದನೆಯನ್ನು ಕೂಡ ಮಾಡಿದ್ದಾರೆ. ಉತ್ತರ ಕೊಡುವುದಕ್ಕೆ ಈ ಸದನದಲ್ಲಿ ಅವಕಾಶವೆನ್ನುವುದಾದರೆ, ಬಹುಶಃ ಸದನದ ಸಂಪ್ರದಾಯದ ಬಗ್ಗೆ ಅನೇಕಸಾರಿ ನಮಗೆ ಮಾರ್ಗದರ್ಶನ ಮಾಡತಕ್ಕ ಅನೇಕ ಜನ ಹಿರಿಯ ಮುಖಂಡರುಗಳು ಅವರು ತೀರ್ಮಾನ ಅಂತಿಮ ಏನು ಬೇಕಾದರೂ ಮಾಡಿಕೊಳ್ಳಬಹುದು. ಆದರೆ ಸದನದಲ್ಲಿ ಉತ್ತರ ಕೊಡುವುದಕ್ಕೂ ಅವಕಾಶವಿಲ್ಲ, ನಿನ್ನೆ ಲಾಯಡ್ಸ ಕಂಪನಿ, ಮುಂಬಯಿ ಕಂಪನಿ ಬಗ್ಗೆ ಹೇಳಿದ್ದಾರೆ ನನ್ನ ಉತ್ತರ ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟ್ಸ ಇವೆ ಸಭೆಯ ಮುಂದಿಡಬೇಕು. ಅದೆಲ್ಲ ಹೇಳಿದ್ದಾರೆ, ಅದಕ್ಕೂ ಅವಕಾಶವಿಲ್ಲವೆಂದರೆ, ನಾವು ನಿಮ್ಮ ರಕ್ಷಣೆಯನ್ನು ಕೇಳುತ್ತೇವೆ.

MR. SPEAKER : This is what I am appealing to the Members of the Oppostion. ವಿರೋಧಪಕ್ಷದ ನಾಯಕರು, ಇತರ ಪಕ್ಷಗಳ ನಾಯಕರುಗಳಾದಿಯಾಗಿ ನಾನು ಅದನ್ನೆ ಕೇಳುತ್ತಿದ್ದೇನೆ. ನೀವು ಯಾವುದೇ ರೀತಿಯಾದ ಹೋರಾಟ ಮಾಡುವುದಕ್ಕೆ ನಾನು ಅಡ್ಡ ಬರುವುದಿಲ್ಲ. ಇದು ನಿಮ್ಮ ಮೂಲಭೂತ ಹಕ್ಕು. ಆದರೆ ಅವರು ಮಂತ್ರಿಗಳು ಎನ್ನತಕ್ಕ ಪ್ರಶ್ನೆಯಲ್ಲ, ಈ ಸದನದ ಯಾವುದೇ ಒಬ್ಬ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ನಾನು ಅವಕಾಶವನ್ನು ಕೊಡದೇ ಹೋದರೆ, ನ್ಯಾಯಬದ್ಧವಾಗಿ ಅವರಿಗೆ ಸಿಗಬೇಕಾಗಿರತಕ್ಕ ಅವಕಾಶವನ್ನು ಕೊಡದಿದ್ದರೆ ನಾಳೆ ನಮ್ಮನ್ನು ಸಮಾಜ ಏನು ಅನ್ನುತ್ತದೆ? ಪತ್ರಿಕೆಗಳು ಏನು ಬರೆಯುತ್ತವೆ? ದೇಶಕ್ಕೆ ನಾನು ಏನು ಹೇಳಬೇಕು?

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಜಾನಸನ್ ಅವರು ಒಂದು ಮಾತನ್ನು ಹೇಳಿದ್ದಾರೆ. Shoot him with the gun, if it fails, beat him with the but of the gun. ಅಂತ They are now trying to beat me with the but of the gun because they don't have any reasoning at all. ಈಗ ಇವರು ಹೇಳಿದ್ದೆಲ್ಲ ಪತ್ರಿಕೆಯಲ್ಲಿ ಹೋಗುತ್ತದೆ. ನಮ್ಮ ಉತ್ತರವನ್ನು ಕೇಳಿಸಿಕೊಳ್ಳುವುದಕ್ಕೆ ಅವರಿಗೆ ಇಷ್ಟವಿಲ್ಲವೆಂದರೆ. Is it the way of democracating functioning?

(ಬಾವಿಯಲ್ಲಿ ಸೇರಿದ್ದ ವಿರೋಧ ಪಕ್ಷದ ಸದಸ್ಯರುಗಳಲ್ಲಿ ಕೆಲವರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಶ್ರೀ ಆರ್.ಎಲ್. ಜಾಲಪ್ಪ : ಅದನ್ನು ಹೇಳುವುದಕ್ಕೆ ನೀವು ಯಾರು? ಜನರು ಸರ್ಕಾರಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ ಮತ್ತು ನಾವು ಮಸೂದೆಯನ್ನು ತಂದಿದ್ದೇವೆ. ನೀವು ಒಪ್ಪಿಕೊಳ್ಳುವುದು ಬಿಡುವುದು ನಿಮಗೆ ಬಿಟ್ಟಿದ್ದು. ನಮಗೆ ಅಧಿಕಾರ ಇದೆ. People have voted us ನಾವು ತಂದಿರುವುದು ತಪ್ಪೆಂದು ನೀವು ಹೇಳಬೇಕಾಗಿಲ್ಲ. Vote against us. ಜನ ಅಧಿಕಾರ ಕೊಟ್ಟಿದ್ದಾರೆ. ನೀವಲ್ಲ ನಮಗೆ ಅಧಿಕಾರ ಕೊಟ್ಟಿದ್ದು. Vote it down.

(ಬಾವಿಯಲ್ಲಿ ಸೇರಿದ್ದ ಸದಸ್ಯರು ಕರಾಳ ಶಾಸನಕ್ಕೆ ಧಿಕ್ಕಾರ ಎಂದು ಘೋಷಣೆ ಕೂಗಿದರು. ಕೆಲವರು ಮಾತನಾಡಲು ಪ್ರಾರಂಭಿಸಿದರು.)

ಶ್ರೀ ಆರ್.ಎಲ್. ಜಾಲಪ್ಪ : ಯಾರು ವ್ಯವಸಾಯ ಮಾಡದೆ ಜೀವನ ಮಾಡುತ್ತಾರೆ, ಅವರೆಲ್ಲ ಇದನ್ನೇ ಹೇಳುವುದು. ಜಮೀನು ತೆಗೆದುಕೊಂಡು ವ್ಯವಸಾಯ ಮಾಡದೆ ಜೀವನ ಮಾಡುತ್ತಾರೆ, ಅವರೆಲ್ಲ ಇದನ್ನೇ ಹೇಳುವುದು. ಜಮೀನು ತೆಗೆದುಕೊಂಡು ವ್ಯವಸಾಯ ಮಾಡಿ ಜೀವನ ಮಾಡಿದರೆ ಗೊತ್ತಾಗುತ್ತದೆ.

ಅಧ್ಯಕ್ಷರು : ಶಾಸನ ಕರಾಳವಾದ ಶಾಸನವೋ, ಶಾಸನ ಉತ್ತಮವಾದ ಶಾಸನವೋ ಅದು ಅವರವರ ವಿವೇಚನೆಗೆ ಬಿಟ್ಟಿದ್ದುದು. ಮೂಲಭೂತವಾಗಿ ಈ ಸದನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಇವರು ಮಾತನಾಡುವುದಕ್ಕೆ ನಾನು ಅವಕಾಶವನ್ನು ಕೊಡಲಿಲ್ಲ ಎನ್ನುವುದಾದರೆ ಸರಿಯಲ್ಲ. ನೀವು ಹಲವಾರು ರೀತಿಯ ಗಂಭೀರ ಆರೋಪಗಳನ್ನು ಮಾಡಿದ್ದೀರಿ. ಹಾಗಾದರೆ ನೀವು ಆರೋಪಣೆಗಳನ್ನು ಮಾಡಿ ಅದಕ್ಕೆ ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡದೆ ಕಳಿಸಬೇಕಾ?

(ಗೊಂದಲ)

SRI R.L. JALAPPA : Sir, they are trying to teach me.

(ಧರಣಿ ಕುಳಿತಿದ್ದ ಸದಸ್ಯರು ಬಾವಿಯಲ್ಲಿ ಎದ್ದುನಿಂತುಕೊಂಡು ಮಾತನಾಡುತ್ತಲೇ ಇದ್ದರು)

ಅಧ್ಯಕ್ಷರು : ನನಗೆ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದ್ದೀರಿ. ನನಗೆ ತಮ್ಮ ಬಗ್ಗೆ ಅಪಾರವಾದ ಗೌರವ ಮತ್ತು ಮೆಚ್ಚುಗೆ ಇದೆ. ನಾನು ತಮ್ಮಲ್ಲಿ ಪದೆಪದೇ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ಹೆಚ್ಚು ಮಾಡನಾಡದೇ ಇದ್ದಿದ್ದರೆ ನನಗೆ ಸಮಸ್ಯೆಯೇ ಇರುತ್ತಿರಲಿಲ್ಲ. ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ಕೆಲವು ಗಂಭೀರವಾದ ಆರೋಪಗಳನ್ನು ಅವರಮೇಲೆ ಮಾಡಿದ್ದೀರಿ. ಅಂತಹ ಆರೋಪಗಳನ್ನು ಮಾಡಿರುವಾಗ ಅದಕ್ಕೆ ಉತ್ತರಿಸತಕ್ಕಂಥ ಅವಕಾಶ ಕೊಡದೆ ನಾನು ಸದನವನ್ನು ನಡೆಸಿದರೆ ಇದು ಒಂದು ಹೊಸ ಸಂಪ್ರದಾಯವನ್ನು ನಾನು ಹಾಕಿದಂತಾಗುತ್ತದೆ. ನೀವು ನನ್ನ ಮೇಲೆ ಇಷ್ಟು ಗೌರವ ಇಟ್ಟುಕೊಂಡಿರತಕ್ಕಂಥವರು ಹೀಗೆ ಮಾಡಿದರೆ ನನ್ನ ಗೌರವಕ್ಕೆ ನೀವು ಯಾವರೀತಿ ರಕ್ಷಣೆಕೊಟ್ಟಂತಾಗುತ್ತದೆ? ಆದ್ದರಿಂದ ನಾನು ನಿಮ್ಮಲ್ಲಿ ಕೇಳುತ್ತೇನೆ. ಅವರ ಮಾತು ಬಿಡಿ. ನಿಮ್ಮ

ಸಹಕಾರ ಯಥೇಚ್ಚವಾಗಿ ಇದ್ದುದರಿಂದಲೇ ನಾನು ಈ 13 ತಿಂಗಳು ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಂಡಬರುವುದಕ್ಕೆ ಸಾಧ್ಯವಾಗಿದೆ. ನಿಮ್ಮಲ್ಲಿ ನಾನು ಪುನಃ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಗಂಭೀರವಾದ ಆರೋಪಗಳನ್ನು ಅವರಮೇಲೆ ಮಾಡಿದ್ದೀರಿ. ಯಾವುದೋ ಬೊಂಬಾಯಿ ಕಂಪನಿಗೆ ಕೊಟ್ಟಿದ್ದಾರೆ ಎಂದು ಹಲವಾರು ರೀತಿಯ ಆರೋಪಣೆಗಳನ್ನು ಮಾಡಿದ್ದೀರಿ. ಅದಕ್ಕೆ ಅವರು ಏನು ಉತ್ತರ ಕೊಡುತ್ತಾರೆ ಎಂದು ಕೇಳಿ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಕೋಟಿಗಟ್ಟಲೆ ಲೂಟಿ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ನನ್ನ ಅವರ ಮಧ್ಯೆ ಇರತಕ್ಕಂಥ ಜಿಜ್ಞಾಸೆ ಮುಕ್ತಾಯವಾಗಲಿ. ಆಮೇಲೆ ನಿಮ್ಮ ಕಡೆಗೆ ನಾನು ಬರುತ್ತೇನೆ.

(ಬಾವಿಯಿಂದ ವಿರೋಧ ಪಕ್ಷಗಳ ಸದಸ್ಯರು ಮಾತನಾಡುತ್ತಲೇ ಇದ್ದರು. ಒಬ್ಬರು ಮಾನ್ಯ ಸದಸ್ಯರು ಎಲ್ಲ ವಿರೋಧ ಪಕ್ಷದವರನ್ನು ಮತ್ತು ಸಭಾನಾಯಕರನ್ನು ತಮ್ಮ ಕೊಠಡಿಗೆ ಕರೆಸಿ ಮಾತನಾಡಿ ಎಂದು ಮಾನ್ಯ ಅಧ್ಯಕ್ಷರಿಗೆ ಹೇಳಿದರು)

ಅಧ್ಯಕ್ಷರು : ನಾನು ಇದನ್ನು ನನ್ನ ಕೊಠಡಿಗೆ ತೆಗೆದುಕೊಂಡು ಹೋಗುವುದಕ್ಕೆ ತಯಾರಾಗಿಲ್ಲ

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಪತ್ರಿಕೆಗಳಲ್ಲಿ ಆಚ್ಚಾಗಿದೆ. ನಮ್ಮ ಮಂತ್ರಿಗಳು ಹೊರಗಡೆ ಎಲ್ಲಾ ಮಾತನಾಡಿದ್ದಾರೆ. ಇವರ ಆಕ್ಷೇಪಣೆ ಇರುವುದು ಸೆಕ್ಷನ್ 109ರ ಮೇಲೆ ಮಾತ್ರ. ಹಿಂದಿನ ಸರ್ಕಾರ ಏನು ಮಾಡಿತ್ತು, ಬೇರೆ ಬೇರೆ ಸರ್ಕಾರಗಳು ಏನು ಮಾಡಿವೆ ಎಂದು ಹೇಳುವುದಕ್ಕೆ ಹೋದರೆ ಬೇಡವೆಂದು ಹೇಳುತ್ತಿದ್ದೀರಿ. ದಯಮಾಡಿ ಕುಳಿತುಕೊಂಡು ಕೇಳಿ.

(ಕೆಲವು ಸದಸ್ಯರು 'ನಮ್ಮನ್ನು ಬೇಕಾದರೆ ಹೊರಗೆಹಾಕಿ' ಎಂದು ಕೂಗಿದರು. ಸಭೆಯಲ್ಲಿ ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ನಮಗೆ ನಿಮ್ಮನ್ನು ಎತ್ತಿ ಹೊರಗಡೆ ಎತ್ತಿ ಹಾಕುವುದಕ್ಕೆ ಆಗುವುದಿಲ್ಲ. ಇಲ್ಲಿ ಏನು ನಡೆಯುತ್ತಿದೆ ಎಂಬುದು ದೇಶದ ಜನಕ್ಕೆ ಗೊತ್ತಾಗಲಿ. ನಿಮಗೆ ರಾಜ್ಯದಲ್ಲಿ ಕೈಗಾರಿಕೆಗಳು ಬರುವುದಕ್ಕೆ ವಿಶ್ವಾಸ ಇಲ್ಲ, ನಿಮಗೆ ರಾಜ್ಯದಲ್ಲಿ ಹಾರ್ಟಿಕಲ್ಚರ್, ಫ್ಲೋರಿಕಲ್ಚರಿಸ್ಟಗಳು ಬರುವುದಕ್ಕೆ ವಿಶ್ವಾಸ ಇಲ್ಲ, ಈ ರಾಜ್ಯವನ್ನು ಇನ್ನೂ ಮೂರು ವರ್ಷ ಬಡತನದಲ್ಲಿ ಇಟ್ಟು, ಅರೆಕಾಸು ಹೊಟ್ಟೆಯಲ್ಲಿ ರೈತ ಪುಟಗೋಸಿ ಹಾಕಿಕೊಂಡು ತಿರುಗಾಡಿಕೊಂಡು ಜೀವನ ಮಾಡಬೇಕೇ?

(ಗೊಂದಲ

ಮಾನ್ಯ ಮಂತ್ರಿಗಳು ಬಳಸಿದ 'ಪುಟಗೋಸಿ' ಪದಕ್ಕೆ ಕೆಲವರಿಂದ ಆಕ್ಷೇಪಣೆ)

ಶ್ರೀ ಆರ್.ಎಲ್. ಜಾಲಪ್ಪ : ಪುಟಗೋಸಿ ಎಂದರೆ ಲಂಗೋಟಿ. ನಮ್ಮ ಕಡೆ ಭಾಷೆಯಲ್ಲಿ ಹಾಗೆ ಹೇಳುತ್ತಾರೆ.

(ಬಾವಿಯಲ್ಲಿ ನಿಂತಿದ್ದ ವಿರೋಧಿ ಪಕ್ಷಗಳ ಸದಸ್ಯರುಗಳು 'ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗಿದರು. ಅನೇಕರು ಏಕಕಾಲದಲ್ಲಿ ಮಾತನಾಡುತ್ತಿದ್ದರು. ಶ್ರೀ ವಾಟಾಳ್ ನಾಗರಾಜ ಅವರು ಈ ಕರಾಳ ಶಾಸನವನ್ನು ತಂದರೆ ಏನೂ ಇರುವುದಿಲ್ಲ' ಎಂದು ಹೇಳಿದರು)

ಅಧ್ಯಕ್ಷರು : ಅದು ಇರಲಿ, ಇಲ್ಲದೇ ಹೋಗಲಿ. ಅದು ಬೇರೆ ಪ್ರಶ್ನೆ. ನೀವು ವಿರೋಧ ಪಕ್ಷದ ನಾಯಕರಾಗಲೀ, ವಾಟಾಳ್ ನಾಗರಾಜ್ ಅವರಾಗಲೀ, ಖರ್ಗೆಯವರಾಗಲೀ, ಶಿವಪ್ಪನವರಾಗಲೀ, ಯಡಿಯೂರಪ್ಪನವರಾಗಲೀ, ರಾಮಕೃಷ್ಣರವರಾಗಲೀ, ಅತ್ಯಂತ ಹಿರಿಯ ಸದಸ್ಯರು ಇದ್ದೀರಿ. ಕೆಲವು ಹೊಸ ಸದಸ್ಯರು ಈ ಸದನಕ್ಕೆ ಪ್ರವೇಶ ಮಾಡಿರುವುದನ್ನು ಬಿಟ್ಟು. ಎಷ್ಟು ಹೋರಾಟಗಳನ್ನು ಮಾಡಿರುತ್ತೀರಿ. ಎಷ್ಟು ಕಷ್ಟನಷ್ಟಗಳನ್ನು ಅನುಭವಿಸಿದ್ದೀರಿ. ಎಷ್ಟೋಸಲ ಜೈಲಿಗೆ ಹೋಗಿರುತ್ತೀರಿ. ಎಷ್ಟೋ ಸಂದರ್ಭದಲ್ಲಿ ಈ ಸದನದಲ್ಲಿ ಸದಸ್ಯರ ಹಕ್ಕಿನ ರಕ್ಷಣೆ ಬಗ್ಗೆ ಮಾತನಾಡಿರುತ್ತೀರಿ. ನಾನು ನಿಮ್ಮನ್ನು ಕೇಳುವ ಕನಿಷ್ಟ ಪ್ರಶ್ನೆ ಏನೆಂದರೆ, ನೀವು ನಿಮ್ಮ ಮಾತುಗಳನ್ನೆಲ್ಲ ಹೇಳಿದಮೇಲೆ, ನಿಮ್ಮ ಅಭಿಪ್ರಾಯವ್ಯಕ್ತಪಡಿಸಿದ ಮೇಲೆ, ನಿಮ್ಮ ಆರೋಪಣೆಗಳನ್ನು ಮಾಡಿದಮೇಲೆ, ಅವರಿಗೆ ಉತ್ತರ ಕೊಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದರೆ ಇದು ನಾನು ನಿಮ್ಮನ್ನು ಫ್ಯಾಸಿಸ್ಟ ಎಂದು ಹೇಳುವುದಿಲ್ಲ. ವರ್ತನೆ, ಅದು ಫ್ಯಾಸಿಸ್ಟ ವರ್ತನೆಯಾಗುತ್ತದೆ. ಅದು ಫ್ಯಾಸಿಸ್ಟ ವರ್ತನೆಯಾಗುತ್ತದೆ.

(ಮಾನ್ಯ ಅಧ್ಯಕ್ಷರು ಬಳಸಿದ "ಫ್ಯಾಸಿಸ್ಟ" ಪದಕ್ಕೆ ಅನೇಕರ ಆಕ್ಷೇಪಣೆ. ನಿಮ್ಮ ಬಗ್ಗೆ ನಮಗೆ ಗೌರವ ಇದೆ, ಪ್ರತಿಯೊಂದು ಪದವನ್ನು ಪತ್ರಿಕೆಯಲ್ಲಿ ಬರೆಯುತ್ತಾರೆ. ಎಂದು ಕೆಲವು ಸದಸ್ಯರು ಹೇಳಿದರು)

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕೇಳಿ. ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ. ಈ ಪದವನ್ನು ಬೇಕಾದರೆ ತೆಗೆಸುವುದಕ್ಕೆ ನಾನು ಸಿದ್ಧನಿದ್ದೇನೆ...

(ಸಭೆಯು ಪುನಃ ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು : ಅದು ಕರಾಳ ಶಾಸನವೋ, ಉತ್ತಮವಾದ ಶಾಸನವೋ ಬೇರೆ ವಿಷಯ. ನಿಮ್ಮ ಎಲ್ಲ ಪ್ರತಿಭಟನೆಗಳನ್ನು ಈ ಸದನದ ನಿಯಮಾವಳಿ ಚೌಕಟ್ಟಿನಲ್ಲಿ ಮಾಡಬೇಕೇ ಹೊರತು ನಿಮ್ಮ ಮನಸ್ಸಿಗೆ ಬಂದಹಾಗೆ ಮಾಡುವುದಕ್ಕೆ ಆಗುವುದಿಲ್ಲ.

(ಸರ್ಕಾರದ ರೈತವಿರೋಧಿ ನೀತಿಗೆ ಧಿಕ್ಕಾರ- ಎಂದು ಬಾವಿಯಲ್ಲಿದ್ದ ಸದಸ್ಯರು ಕೂಗಿದರು)

ಅಧ್ಯಕ್ಷರು : ನಿಮ್ಮ ಪ್ರತಿಭಟನೆಯನ್ನು ಸ್ವೇಚ್ಛಾನುಸಾರ ಮಾಡುವುದಕ್ಕೆ ಬರುವುದಿಲ್ಲ. ಪ್ರತಿಭಟನೆಯನ್ನು ಕೂಡ ಸದನದ ನಿಯಮಾವಳಿ ಚೌಕಟ್ಟಿನಲ್ಲಿ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ತಮ್ಮ ಸ್ಥಾನಕ್ಕೆ ಮರಳಿದ ನಂತರ) ಮಾನ್ಯ ಅಧ್ಯಕ್ಷರೇ, ಇವತ್ತು ಎಲ್ಲ ವಿರೋಧಿ ಪಕ್ಷದವರು, ಕಾಂಗ್ರೆಸ್, ಬಿಜೆಪಿ, ಕೆಪಿಸಿ ಎಲ್ಲರೂ ಒಟ್ಟಾಗಿ ಈ ಕಾನೂನು ಸರಿಯಿಲ್ಲವೆಂದು ಪದೇಪದೇ ಹೇಳುತ್ತಿದ್ದೇವೆ. ನಮ್ಮ ಡಿಮ್ಯಾಂಡ್ ಇರುವುದು ಮೂರು...

(ಗೊಂದಲ)

ಅಧ್ಯಕ್ಷರು : ನಾನು ಹೇಳುತ್ತೇನೆ ಕೇಳಿ. You cannot prevent a member from speaking. ಇಡೀ ಸದನ ಒಂದಾಗಿ ಜಾಲಪ್ಪನವರಿಗೆ ಮಾತನಾಡುವುದಕ್ಕೆ ಬಿಡಬಾರದು ಎಂದು ಹೇಳಿದರೂ ಕೂಡ ನನಗೆ ಇಲ್ಲಿ ಅವರಿಗೆ ಅವಕಾಶ ಮಾಡಿಕೊಡುವುದಕ್ಕೆ ಅಧಿಕಾರ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಇದರ ಹಿಂದೆ ಕಾನೂನು ಪಾಸ್ ಮಾಡಿದ್ದಾರೆ, ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ನಮ್ಮ ಗೈರುಹಾಜರಿಯಲ್ಲಿ ಇದನ್ನು ಪಾಸ್ ಮಾಡಿದ್ದಾರೆ. ನಾವು ಇದರ ಮೇಲೆ ಬೆಳಕು ಚೆಲ್ಲಿದ್ದೇವೆ. ದಯವಿಟ್ಟು ಇದನ್ನು ವಾಪಾಸ್ಸು ತೆಗೆದುಕೊಳ್ಳಲಿ.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಿಮ್ಮ ರಾಜಕೀಯ ಭಿನ್ನಾಭಿಪ್ರಾಯಗಳು, ನಿಮ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು, ವೈಚಾರಿಕ ಭಿನ್ನಾಭಿಪ್ರಾಯಗಳ ಏನೇ ಇರಲಿ. ಮೂಲಭೂತವಾಗಿ ಪ್ರಜಾಪ್ರಭುತ್ವ ತತ್ವದ ಮೇಲೆ ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲು ಚರ್ಚೆಯಾಗಿರಲಿಲ್ಲವೆಂದು ಅವರ ಮನ ಒಲಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅವರಿಗೆ ವಿವರಿಸುವ ಪ್ರಯತ್ನ ಮಾಡಿದ್ದೇವೆ. ಇಷ್ಟಾದ ಮೇಲೆ ಇದನ್ನು ವಿತಡ್ರಾ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದೇವೆ. ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನೀವು ಒಂದು ಲಕ್ಷ ಸಲ ಬೇಕಾದರೂ ಮನವಿ ಮಾಡಿಕೊಳ್ಳಿ. ನನ್ನ ಅಭ್ಯಂತರ ಇಲ್ಲ. ಆದರೆ ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕು. ಇದು ಪ್ರಜಾಪ್ರಭುತ್ವ ಧರ್ಮ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಿಂದ ರೈತರ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಆರ್.ಎಲ್. ಜಾಲಪ್ಪ : ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ. ಈ ಕಾನೂನು ಮಾಡುವುದಕ್ಕೆ ಜನರು ಅಧಿಕಾರ ಕೊಟ್ಟಿದ್ದಾರೆ.

(ಅತೀವ ಗೊಂದಲ. ಬಾವಿಯಲ್ಲಿ ನಿಂತಿದ್ದ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

(INTERRUPTIONS)

MR. SPEAKER : Iam a very pained man today. What hurts me in the Chair is that I cannot ensure right of a Member to give a reply. I am terribly depressed. This is an un-precedented situation in this House. I am extremely sorry. I am highly thankful to you all for all the co-operation extended to me for the last 14 months. I would never be a party for this kind of a thing, not

allowinga Member to give his reply. Thank you very much for the co-operation.

ಸದನವನ್ನು ಮುಂದಕ್ಕೆ ಹಾಕಿದ್ದೇನೆ.

(ಸದನವನ್ನು 5.41 ಗಂಟೆಗೆ ಮುಂದೂಡಲಾಯಿತು)

ಸಭೆಯು ಸಂಜೆ 6 ಗಂಟೆ 22 ಕ್ಕೆ ಪುನರಾರಂಭಗೊಂಡಿತು

(ಶ್ರೀ ರಮೇಶಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಡಿ. ದೇವೇಗೌಡ : ಅಧ್ಯಕ್ಷರೇ ಇವತ್ತೇನು ನಾವು ಭೂಸುಧಾರಣೆಗೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿಯನ್ನು ಸಭೆಯ ಅಂಗೀಕಾರಕ್ಕೆ ಮಂಡಿಸಿದ್ದೇವೆಯೋ ಆ ವಿಷಯದಲ್ಲಿ ನಿನ್ನೆ ಸನ್ಮಾನ್ಯ ವಿರೋಧಪಕ್ಷದ ಸದಸ್ಯರು ಅವರವರ ಪಕ್ಷದ ನಿಲುವನ್ನು ತಮ್ಮ ಭಾಷಣದ ಮೂಲಕ ವ್ಯಕ್ತಪಡಿಸಿ ತೀವ್ರತರ ಪ್ರತಿಭಟನೆ ವ್ಯಕ್ತಪಡಿಸಿರುತ್ತಾರೆ. ಅದರ ಜೊತೆಗೆ ಸರ್ಕಾರದ ಮೇಲೆ ಕೆಲವು ಆಪಾದನೆಗಳನ್ನು ಕೂಡ ಮಾಡಿದ್ದಾರೆ. ಯಾವುದೋ ಮುಂಬೈ ಕಂಪನಿಗೆ ಮತ್ತೊಂದಕ್ಕೆ ಶಾಮಿಲಾಗಿಬಿಟ್ಟಿದ್ದೇವೆ ಎಂದು ಹೇಳಿದ್ದಾರೆ ಅದರ ಬಗ್ಗೆ ಉತ್ತರ ಕೊಡಬೇಕಾದ್ದು ಸರ್ಕಾರದ ಧರ್ಮ. ವಿರೋಧಪಕ್ಷದವರು ಏನು ಹೇಳುತ್ತಾರೋ ಅದನ್ನು ಹೇಳಲು ಅವಕಾಶ ನಾವು ಮಾಡಿಕೊಟ್ಟಾಗ ನಾವು ಹೇಳುವುದನ್ನು ಹೇಳುವುದಕ್ಕೆ ಅವರೂ ಅವಕಾಶ ಮಾಡಿಕೊಡಬೇಕಾದ್ದು ಪ್ರಜಾಪ್ರಭುತ್ವದ ಉಭಯ ಪಕ್ಷಗಳ ಒಂದು ಸಂಹಿತೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಆದರೆ ಇವತ್ತು ಉತ್ತರ ಕೊಡುವುದಕ್ಕೆ ಈಗಲೂ ಅವಕಾಶ ಮಾಡಿಕೊಡಬೇಕೆಂದು ಮತ್ತು ಈ ಸದನದಲ್ಲಿ ಆರೋಗ್ಯಕರವಾದ ನಡವಳಿಕೆಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಎಲ್ಲ ವಿರೋಧ ಪಕ್ಷದ ಮುಖಂಡರನ್ನೂ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ : ಅಧ್ಯಕ್ಷರೇ ಸೆಕ್ಷನ್ 109 (1)ಎ ಗೆ ಒಂದು ತಿದ್ದುಪಡಿಯನ್ನು ತಂದು ಅದನ್ನು ಸುಗ್ರೀವಾಜ್ಞೆ ಮೂಲಕ ತರಲಾಗಿತ್ತು. ಈಗ ಅದನ್ನು ಸದನದಲ್ಲಿ ಒಪ್ಪಿಗೆಗಾಗಿ ಮಂಡಿಸಿದ್ದೇವೆ. ಸೆಕ್ಷನ್ 109 ಹಿಂದೆ ಯಾವರೀತಿ ಇತ್ತು ಎಂದರೆ

`Certain land to be exempted from certain provisions subject to the provisions of the Karnataka Act, 11 of 1963 the State Government may by notification exempt from the provisions of Section 80 any land in any area to be used for non-agricultural and industrial development...

ಆದರೆ ಕಳೆದ ಅಧಿವೇಶನದಲ್ಲಿ...

(ಈ ಹಂತದಲ್ಲಿ ಧರಣಿಯಲ್ಲಿದ್ದ ವಿರೋಧಪಕ್ಷಗಳ ಸದಸ್ಯರು ಕರಾಳ ಶಾಸನಕ್ಕೆ ಧಿಕ್ಕಾರ ಮುಂತಾ ಘೋಷಣೆಗಳನ್ನು ಕೂಗಲಾರಂಭಿಸಿದರು)

ಶ್ರೀ ಹೆಚ್.ಡಿ. ದೇವೇಗೌಡ : ಅವರ ಮತ್ತು ನಮ್ಮ ನಡತೆಗಳಿರಡರ ಬಗ್ಗೆ ಈ ರಾಜ್ಯದ

ಮಹಾಜನ ಹೊರಗೆ ತೀರ್ಮಾನ ಮಾಡುತ್ತಾರೆ ಆದ್ದರಿಂದ ಇದನ್ನು ತಾವು ಈಗ ವೋಟಿಗೆ ಹಾಕಬೇಕೆಂದು ತಮ್ಮಲ್ಲಿ ವಿನಂತಿಮಾಡುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1996ರ ಕರ್ನಾಟಕ ಭೂಸುಧಾರಣೆಗಳ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ

ಅಧ್ಯಕ್ಷರು : ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 1, ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, 1996ರ ಕರ್ನಾಟಕ ಭೂಸುಧಾರಣೆಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ '1996ರ ಕರ್ನಾಟಕ ಭೂಸುಧಾರಣೆಗಳ ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು. ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 9.30 ಕ್ಕೆ ಪುನಃ ಸೇರುವುದು.

(ಸದನವು ಸಂಜೆ 6 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 2ನೇ ಮಾರ್ಚಿ 1996ರ ಬೆಳಿಗ್ಗೆ 9.30 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)